ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಡಿಸೆಂಬರ್ 01, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 199 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



**ಕನಕದಾಸರ ಜಯಂತಿ** ದಾವಣಗೆರೆ ಪಿ.ಬಿ ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ದಾಸಶ್ರೇಷ್ಠ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಶಾಸಕ ಕೆ. ಬಸವಂತಪ್ಪ ಉದ್ಘಾಟಿಸಿದರು.

# ಸಮೀಕ್ಷೆ: 2 ಕಾಂಗ್ರೆಸ್, 2 ಬಿಜೆಪಿ, 1 ಅತಂತ್ರ

ನವದೆಹಲಿ, ನ. 30 – ಛತ್ತೀಸ್‌ಘಡ ಹಾಗೂ ತೆಲಂಗಾಣಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ, ಮಧ್ಯ ಪ್ರದೇಶ ಹಾಗೂ ರಾಜಸ್ಥಾನಗಳಲ್ಲಿ ಬಿಜೆಪಿಗೆ ಮುನ್ನಡೆ ಸಿಗಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ತಿಳಿಸಿವೆ.

ಮಿಜೋರಾಂನಲ್ಲಿ ಜೊರಂ ಪೀಪಲ್ಸ್ ಮೂವ್‌ಮೆಂಟ್ (ಝಡ್.ಪಿ.ಎಂ.) ಹಾಗೂ ಮಿಜೋ ನ್ಯಾಷನಲ್ ಫ್ರಂಟ್ (ಎಂ.ಎನ್.ಎಫ್.) ನಡುವೆ ನಿಕಟ ಸ್ಪರ್ಧೆ ಏರ್ಪಡಲಿದೆ. ಕಾಂಗ್ರೆಸ್ ಹಾಗೂ ಬಿಜೆಪಿಗಳು ಹಿಂದೆ ಬೀಳಲಿವೆ ಎಂದೂ ಸಮೀಕ್ಷೆಗಳು ಹೇಳಿವೆ.

> **ಪಂಚ ರಾಜ್ಯಗಳ ಮತಗಟ್ಟೆ ಸಮೀಕ್ಷೆಯಲ್ಲಿ ಛತ್ತೀಸ್‌ಘಡ, ತೆಲಂಗಾಣಗಳಲ್ಲಿ ಕಾಂಗ್ರೆಸ್‌ಗೆ ಮುನ್ನಡೆ. ಮಧ್ಯ ಪ್ರದೇಶ ಹಾಗೂ ರಾಜಸ್ಥಾನಗಳಲ್ಲಿ ಬಿಜೆಪಿ ಮೇಲುಗೈ**

ಪಂಚ ರಾಜ್ಯಗಳಿಗೆ ನವೆಂಬರ್ 7ರಿಂದ ಆರಂಭವಾದ ಮತದಾನ, ನವೆಂಬರ್ 30ರಂದು ಅಂತ್ಯಗೊಂಡಿದೆ. ಡಿಸೆಂಬರ್ 3ರಂದು ಮತಗಳ ಎಣಿಕೆ ನಡೆಯಲಿದೆ. ಮಧ್ಯ ಪ್ರದೇಶದಲ್ಲಿ ಆಡಳಿತಾರೂಢ ಬಿಜೆಪಿಗೆ ಮುನ್ನಡೆ ಇದೆ ಎಂದು ಸಮೀಕ್ಷೆಗಳು ತಿಳಿಸಿವೆ. ರಾಜ್ಯ 230 ಶಾಸಕರನ್ನು ಹೊಂದಿದೆ. ಜನ್ ಕಿ ಬಾತ್ ಪ್ರಕಾರ ಬಿಜೆಪಿ 100-123 ಸ್ಥಾನ ಗಳಿಸಲಿದೆ. ಕಾಂಗ್ರೆಸ್ ಪಕ್ಷ 102-125 ಸ್ಥಾನ ಗಳಿಸಲಿದೆ. ರಿಪಬ್ಲಿಕ್ ಟಿವಿ - ಮಾಟ್ರೀಜ್ ಪ್ರಕಾರ ಬಿಜೆಪಿ 118-130 ಹಾಗೂ ಕಾಂಗ್ರೆಸ್ 97-107 ಸ್ಥಾನ ಪಡೆಯಲಿದೆ.

200 ಸ್ಥಾನಗಳ ರಾಜಸ್ಥಾನದಲ್ಲಿ ಕಾಂಗ್ರೆಸ್ 86 – 106 ಸ್ಥಾನ ಗಳಿಸಲಿದೆ ಮತ್ತು ಬಿಜೆಪಿ 80-100 ಸ್ಥಾನ ಗಳಿಸಲಿದೆ ಎಂದು ಇಂಡಿಯಾ ಟುಡೇ - ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ತಿಳಿಸಿದೆ.

ಜನ್ ಕಿ ಬಾತ್ ಪ್ರಕಾರ (4ನೇ ಪುಟಕ್ಕೆ)

# ಬೆಳೆ ನಷ್ಟ: 2 ಸಾವಿರ ರೂ. ಪರಿಹಾರ

## ಕೇಂದ್ರದ ಹಣ ಕಾಯಲು ಸಾಧ್ಯವಿಲ್ಲ ಎಂದು ರಾಜ್ಯದಿಂದಲೇ ಮೊದಲ ಕಂತು ಬಿಡುಗಡೆ

ಬೆಂಗಳೂರು, ನ. 30- ಕೇಂದ್ರ ಸರ್ಕಾರ ಬೆಳೆ ಪರಿಹಾರ ನೀಡಲು ಮೀನಾಮೇಷ ಎಣಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವೇ ಅರ್ಹ ರೈತರಿಗೆ ತಲಾ ಎರಡು ಸಾವಿರ ರೂ. ಬೆಳೆ ಪರಿಹಾರ ಘೋಷಣೆ ಮಾಡಿದೆ.

ಗೃಹ ಕಚೇರಿ ಕೃಷ್ಣಾದಲ್ಲಿ ತುರ್ತು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದ ಮುಖ್ಯಮಂತ್ರಿ ಅವರು, ಕೇಂದ್ರದಿಂದ ಹಣ ಬರುವವರೆಗೂ ಕಾಯಲು ಸಾಧ್ಯವಿಲ್ಲ ಎಂಬ ಕಾರಣದಿಂದ ರಾಜ್ಯ ಸರ್ಕಾರವೇ ಮೊದಲ ಕಂತು ಬಿಡುಗಡೆ ಮಾಡಿದೆ.



> **ಪರಿಹಾರವನ್ನು ಹೆಕ್ಟೇರ್ ಲೆಕ್ಕದಲ್ಲಿ ನೀಡುತ್ತಿಲ್ಲ. ಬೆಳೆ ಕಳೆದುಕೊಂಡ ಎಲ್ಲಾ ಅರ್ಹ ರೈತರಿಗೆ ಪರಿಹಾರ ನೀಡಲಾಗುತ್ತಿದೆ: ಸಿದ್ದರಾಮಯ್ಯ**

ಕೇಂದ್ರ ಸರ್ಕಾರ ರಾಜ್ಯದ ರೈತರಿಗೆ ಪರಿಹಾರ ಕೊಡಲು ಇನ್ನೂ ಪ್ರಾಥಮಿಕ ಸಭೆಯನ್ನು ನಡೆಸದ ಹಿನ್ನೆಲೆಯಲ್ಲಿ ರಾಜ್ಯದಿಂದ ತುರ್ತು ಕ್ರಮ ಕೈಗೊಳ್ಳಲಾಗಿದೆ. ಕೇಂದ್ರಕ್ಕೆ ಬರೆದ ಪತ್ರಗಳಿಗೂ ಪ್ರತಿಕ್ರಿಯೆ ಇಲ್ಲ. ರಾಜ್ಯದಿಂದ ಮೂವರು ಸಚಿವರು ದೆಹಲಿಗೆ ಹೋದರೂ ಸಕಾರಾತ್ಮಕ ಪ್ರತಿಕ್ರಿಯೆ ಕೇಂದ್ರದಿಂದ ಸಿಕ್ಕಿಲ್ಲ ಎಂದು ಮುಖ್ಯಮಂತ್ರಿ ಆರೋಪಿಸಿದರು.

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 150 ಮಾನವ ದಿನಗಳ ಉದ್ಯೋಗ ಕೊಡಲು ಅನುಮತಿ ಕೋರಲಾಗಿತ್ತು. ಅದಕ್ಕೂ ಕೇಂದ್ರ ಇನ್ನೂ ಅನುಮತಿ ನೀಡಿಲ್ಲ. ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತವೆಂದು ಮೂರು ಹಂತಗಳಲ್ಲಿ ಘೋಷಿಸಿದ್ದೇವೆ. 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಆಗಿದೆ ಎಂದರು.

18171.44 ಕೋಟಿ ರೂ. ಪರಿಹಾರದ ಆರ್ಥಿಕ ನೆರವು ನೀಡಲು ಕೇಂದ್ರಕ್ಕೆ ಪತ್ರ ಬರೆದಿದ್ದೇವೆ. ಕೇಂದ್ರ ನಮ್ಮ ತೆರಿಗೆ ಹಣದ ಪಾಲನ್ನು ನಮಗೆ ವಾಪಾಸ್ ಕೊಟ್ಟರೂ ಸಾಕು. ಸೆ. 21ರಂದು ಕೇಂದ್ರಕ್ಕೆ ಮೊದಲ ಮನವಿ ಮಾಡಿದ್ದೆವು ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರದ ಅಧಿಕಾರಿಗಳ ನೇತೃತ್ವದ ಅಧ್ಯಯನ ತಂಡ ಅ.4 ರಿಂದ ಅ. 9ರವರೆಗೆ ರಾಜ್ಯ ಪ್ರವಾಸ ಮಾಡಿ ಬರ ಸಮೀಕ್ಷೆ ನಡೆಸಿ, ವರದಿ ನೀಡಿದೆ. ನಾವೆಲ್ಲಾ ಕೇಂದ್ರ ತಂಡವನ್ನು ಭೇಟಿ ಮಾಡಿ ಚರ್ಚಿಸಿ ಬರದ ಸ್ಥಿತಿ ವಿವರಿಸಿದ್ದೇವೆ.

ದೇಶದ 12 ರಾಜ್ಯಗಳಲ್ಲಿ ಬರಗಾಲದ ಸ್ಥಿತಿ ಇದೆ. 4663 ಕೋಟಿ ರೂ.ಬೆಳೆ ನಷ್ಟ ಪರಿಹಾರ ಕೇಂದ್ರಕ್ಕೆ ಕೇಳಿದ್ದೆವು. ಕೇಂದ್ರ ಸಚಿವರಿಗೂ ಮನವಿ ಮಾಡಿದ್ದೇವೆ. ಇವತ್ತಿನವರೆಗೂ ಕೇಂದ್ರ ಸಭೆಯನ್ನೇ ನಡೆಸಿಲ್ಲ. ಸಮಯ ಕೇಳಿದರೂ ಭೇಟಿಗೆ ಅವಕಾಶ ಕೊಟ್ಟಿಲ್ಲ ಎಂದು ಮುಖ್ಯಮಂತ್ರಿ ಆರೋಪಿಸಿದರು.

ಅಧಿಕಾರಿಗಳನ್ನಾದರೂ ಭೇಟಿ ಮಾಡಿ ಎಂದು ಹೇಳಿ ನಾನು ಮೂವರು ಸಚಿವರನ್ನು ದೆಹಲಿಗೆ ತೆರಳಲು ಹೇಳಿದ್ದೆ. 3 ಜನ ದೆಹಲಿಗೆ ಹೋಗಿ ಅಧಿಕಾರಿಗಳಿಗೆ ವಿವರಿಸಿದ್ದಾರೆ. ಕೇಂದ್ರ ಹಣಕಾಸು ಸಚಿವರನ್ನು ನಮ್ಮ ಸಚಿವರು (4ನೇ ಪುಟಕ್ಕೆ)

# ನಗರದಲ್ಲಿ ವೀರಶೈವ ಮಹಾಸಭಾ ಅಧಿವೇಶನಕ್ಕೆ ಹಂದರ ಕಂಬದ ಪೂಜೆ

ದಾವಣಗೆರೆ, ನ. 30 – ಇದೇ ದಿನಾಂಕ 23 ಹಾಗೂ 24ರಂದು ನಡೆಯಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನಕ್ಕೆ ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಆವರಣದಲ್ಲಿ ಹಂದರ ಕಂಬದ ಪೂಜೆಯನ್ನು ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಇಂದು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಉಪ ಪಂಗಡಗಳನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆಗೊಳಿಸುವುದು ಸೇರಿ ಸಮಾಜದ ಅನೇಕ ವಿಚಾರಗಳ ಬಗ್ಗೆ ಚರ್ಚಿಸಿ, ನಿರ್ಣಯ ಅಂಗೀಕರಿಸಿ ಸರ್ಕಾರಕ್ಕೆ (4ನೇ ಪುಟಕ್ಕೆ)



# ಸರ್ಕಾರಿ ನೌಕರರ ಮೇಲಿನ ಹಲ್ಲೆ ಶಿಕ್ಷೆ ಇಳಿಕೆಗೆ ಸಮಿತಿ ಶಿಫಾರಸ್ಸು

ನವದೆಹಲಿ, ನ. 30 - ಸರ್ಕಾರಿ ನೌಕರರ ಮೇಲೆ ಹಲ್ಲೆ ನಡೆಸುವ ಇಲ್ಲವೇ ಅವರ ಕೆಲಸಕ್ಕೆ ಅಡ್ಡಿ ಪಡಿಸುವ ಅಪರಾಧಿಕ ಕೃತ್ಯಕ್ಕೆ ವಿಧಿಸಲಾಗುವ ಶಿಕ್ಷೆಯನ್ನು ಎರಡು ವರ್ಷದಿಂದ ಒಂದು ವರ್ಷಕ್ಕೆ ಇಳಿಕೆ ಮಾಡುವಂತೆ ಸಂಸದೀಯ ಸಮಿತಿ ಶಿಫಾರಸ್ಸು ಮಾಡಿದೆ.

ಬಿಜೆಪಿ ಸಂಸದ ಬ್ರಿಜ್ ಲಾಲ್ ಅವರ ನೇತೃತ್ವದ ಗೃಹ ವ್ಯವಹಾರಗಳ ಸಂಸತ್ತಿನ ಸ್ಥಾಯಿ ಸಮಿತಿ ಈ ಬಗ್ಗೆ ಶಿಫಾರಸ್ಸು ಮಾಡಿದೆ. ಕಾಯ್ದೆಯಲ್ಲಿರುವ ಈ ಅಂಶವನ್ನು ಸಾರ್ವಜನಿಕ ಉದ್ಯೋಗಿಗಳು ತೀವ್ರ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಪ್ರತಿಭಟನೆಗಳ ಸಂದರ್ಭದಲ್ಲೂ ಈ ಕಾಯ್ದೆ ಬಳಸಲಾಗುತ್ತಿದೆ ಎಂದು ಸಮಿತಿ ಹೇಳಿದೆ. ಕೇಂದ್ರ ಸರ್ಕಾರ ಭಾರತೀಯ ದಂಡ ಸಂಹಿತೆಯ ಜಾಗದಲ್ಲಿ ಭಾರತೀಯ ನ್ಯಾಯ ಸಂಹಿತೆಯನ್ನು ಜಾರಿಗೆ ತರಲು ಬಯಸಿದೆ. ಪ್ರಸ್ತಾಪಿತ ನ್ಯಾಯ ಸಂಹಿತೆಯಲ್ಲಿ ಶಿಕ್ಷೆ ಇಳಿಕೆಯ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಲಾಗಿದೆ.

# ಪಂಚ ರಾಜ್ಯಗಳಲ್ಲಿ 2 ಸಾವಿರ ಕೋಟಿ ರೂ. ಆಮಿಷಗಳ ವಶ

ನವದೆಹಲಿ, ನ. 30 - ಪಂಚ ರಾಜ್ಯಗಳ ಚುನಾವಣೆಯಲ್ಲಿ ಚುನಾವಣಾ ಆಯೋಗ ತೆಗೆದುಕೊಂಡ ಕ್ರಮಗಳಲ್ಲಿ 2 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಉಚಿತ ಕೊಡುಗೆಗಳು, ನಗದು, ಮಾದಕ ಹಾಗೂ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ.

ಛತ್ತೀಸ್‌ಘಡ, ಮಧ್ಯ ಪ್ರದೇಶ, ಮಿಜೋರಾಂ, ರಾಜಸ್ಥಾನ ಹಾಗೂ ತೆಲಂಗಾಣ ವಿಧಾನಸಭೆಗಳಿಗೆ ಚುನಾವಣೆ ನಡೆದಿತ್ತು.

**Fond Memory**



**S. PRASANNA**
B.E. (Civil), Assistant Engineer
Minor Irrigation, Govt., of Karnataka, Mangaluru
Born On 25.06.1982, Died On 01.12.2020

Ever Loving : Wife : SMT. Neema Susan Monteiro
Sons : Chi. Praneet, Chi. Pratheek
Father : M. Siddaiah, Advocate

# ರೈಲ್ವೆ ಸೇತುವೆ ನಿರ್ಮಾಣಕ್ಕೆ 49.26 ಕೋಟಿ ರೂ. ಮಂಜೂರು

ದಾವಣಗೆರೆ, ನ.30- ಅಶೋಕ ಟಾಕೀಸ್ ಬಳಿಯ ರೈಲ್ವೆ ಸೇತುವೆ ನಿರ್ಮಾಣಕ್ಕೆ ರೈಲ್ವೆ ಸಚಿವಾಲಯವು 49 ಕೋಟಿ ರೂ. ಮಂಜೂರು ಮಾಡಿರುವುದಾಗಿ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.




ಈಗಾಗಲೇ ಅಶೋಕ ಟಾಕೀಸ್ ಹತ್ತಿರದ ರೈಲ್ವೆ ಗೇಟ್ ನಂ 199 ಕ್ಕೆ ಲಘು ವಾಹನಗಳ ಸಂಚಾರಕ್ಕಾಗಿ ಕೆಳಸೇತುವೆ ನಿರ್ಮಾಣ ಮಾಡಲಾಗಿದೆ.

ಈಗ ಅಶೋಕ ಟಾಕೀಸ್ ಹತ್ತಿರ ರೈಲ್ವೆ ಗೇಟ್‌ನಿಂದ 640 ಮೀಟರ್ ದೂರದಲ್ಲಿ ಪದ್ಮಾಂಜಲಿ ಟಾಕೀಸ್ ಹತ್ತಿರ ಬೃಹತ್ ಗಾತ್ರದ ಎರಡು ವೆಂಟ್‌ಗಳ ಕೆಳ ಸೇತುವೆ ನಿರ್ಮಾಣ ಮಾಡಲು ಅನುದಾನವನ್ನು ಮಂಜೂರು ಮಾಡಿದೆ ಎಂದು ಹೇಳಿದ್ದಾರೆ.

ರೈಲ್ವೆ ಮಾರ್ಗದಲ್ಲಿ ಬರುವ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳನ್ನು ನಿರ್ಮೂಲನೆ ಮಾಡಿ ಅಲ್ಲಿ ಕೆಳಸೇತುವೆ ಅಥವಾ ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ರಾಜ್ಯ ಸರ್ಕಾರದ ಶೇ.50 ರಷ್ಟು ಅನುದಾನ ನೀಡಲು ಈ ಹಿಂದೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿತ್ತು. ಆದರೆ, ಇತ್ತೀಚಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಶೇ.50 ರಷ್ಟು ಅನುದಾನ ನೀಡಲು (4ನೇ ಪುಟಕ್ಕೆ)

**ಶಾಮನೂರಿನ ಹಳ್ಳಿಗೌಡ್ರು ರಾಮಚಂದ್ರಪ್ಪ ನಿಧನ**



ದಾವಣಗೆರೆ ಸಿಟಿ ಶಾಮನೂರು ವಾಸಿ, ರೈತ ಮುಖಂಡರಾದ ಶಾಮನೂರು ಹೆಚ್.ಆರ್. ಲಿಂಗರಾಜ್ ಅವರ ಪೂಜ್ಯ ತಂದೆಯವರಾದ
**ಶರಣ ಹಳ್ಳಿಗೌಡ್ರ ರಾಮಚಂದ್ರಪ್ಪ**
ಅವರು ದಿನಾಂಕ 30.11.2023 ರ ಗುರುವಾರ ಬೆಳಗಿನಜಾವ 4.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 94 ವರ್ಷ ವಯಸ್ಸಾಗಿತ್ತು. ಅಪಾರ ಬಂಧುಗಳನ್ನು ಅಗಲಿರುವ ರಾಮಚಂದ್ರಪ್ಪ ಅವರ ಅಂತ್ಯಕ್ರಿಯೆಯನ್ನು 30.11.2023ರ ಗುರುವಾರ ಸಂಜೆ 3 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ :
- ಶ್ರೀಮತಿ ಕುಸುಮ ಶ್ರೀ ಲಿಂಗರಾಜ್ ಹೆಚ್.ಆರ್.
- ಕು. ಪ್ರಿಯಾಂಕ ಹೆಚ್.ಎಲ್.
- ಶ್ರೀಮತಿ ಗೀತಾ ಲಿಂ. ಮಹೇಶ್ವರಪ್ಪ
- ಶ್ರೀಮತಿ ಆಶಾರಾಣಿ, ಶ್ರೀ ಎ.ಎಸ್. ಕಲ್ಲೇಶ್, ಚಿ. ಧ್ರುವ
- ಶ್ರೀಮತಿ ವಾಣಿ, ಶ್ರೀ ಕಿರಣ್ ಕೆ.ಎಂ.

ಹಾಗೂ ಅಪಾರ ಬಂಧು-ಮಿತ್ರರು, ಹಿತೈಷಿಗಳು, ಮೊ. 9844465560

**ಹುಟ್ಟು ಹಬ್ಬದ ಶುಭಾಶಯಗಳು**

51 YEARS BIRTHDAY
AKASH GROUPS
ARI AKASH RICE INDUSTRIES



ಇಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ದಾವಣಗೆರೆ ಉದ್ಯಮಿಗಳೂ, ನಮ್ಮೆಲ್ಲರ ಮಾರ್ಗದರ್ಶಕರೂ, ಆಕಾಶ್ ರೈಸ್ ಇಂಡಸ್ಟ್ರೀಸ್ ಮಾಲೀಕರಾದ
**ಶ್ರೀ ಜರೀಕಟ್ಟೆ ಸುರೇಶ್** ಅವರಿಗೆ 51ನೇ ವರ್ಷದ ಜನ್ಮ ದಿನದ ಶುಭಾಶಯಗಳು.

ಶುಭ ಕೋರುವವರು :
★ ಅಂಜಿನಿ ★ ಗಿರೀಶ್ ಸಜ್ಜನ್ ★ ಬಸವರಾಜ್ ★ ಜಾಕೀರ್ ★ ನರೇಂದ್ರ
★ ಗಿರೀಶ್ ★ ನಾಗರಾಜ್ ★ ಕೊಟ್ರೇಶ್ ★ ಹನುಮಂತ ★ ಗೋಪಿ ★ ಶಂಕರ್
★ ಆಕಾಶ್ ರೈಸ್ ಇಂಡಸ್ಟ್ರೀಸ್ ★ ಆಧ್ಯಾ ಗ್ರೀನ್ ರೆಸಾರ್ಟ್ಸ್
★ ಜರೀಕಟ್ಟೆ ಟ್ರೇಡಿಂಗ್ ಕಂಪನಿ ★ ಆಕಾಶ್ ಫ್ಯೂಯಲ್ ಸ್ಟೇಷನ್
★ ಗಣೇಶ ಅಗ್ರೋ ಫರ್ಟಿಲೈಸರ್ಸ್ ವರ್ಗ,
★ ವಿನಯ್ ರೈಸ್ ಇಂಡಸ್ಟ್ರೀಸ್ ★ ಆಕಾಶ್ ಗ್ರೂಪ್ಸ್

**ಹುಟ್ಟು ಹಬ್ಬದ ಶುಭಾಶಯಗಳು**

51



ಇಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ
ಆಕಾಶ್ ರೈಸ್ ಇಂಡಸ್ಟ್ರೀಸ್ ಮಾಲೀಕರಾದ
**ಶ್ರೀ ಜರೀಕಟ್ಟೆ ಸುರೇಶ್**
ಅವರಿಗೆ 51ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು :
♦ ವಿನಯ ರೈಸ್ ಇಂಡಸ್ಟ್ರೀಸ್ ಸಿಬ್ಬಂದಿ ವರ್ಗ, ಜರೀಕಟ್ಟೆ. ♦ ಪರಮೇಶ್ ಎಸ್
♦ ರಮೇಶ್ ಎಸ್ ♦ ಆಕಾಶ್ ಎಸ್ ♦ ವಿನಯ ಜೆ.ಪಿ, ♦ ಸುಹಾನ್ ♦ ಸಾಗರ ಕೆ.ಎಸ್
♦ ವಿಜಯ ಮೋಟೆಬೆನ್ನೂರು ♦ ಎಸ್.ಎನ್. ಹನುಮಂತ ♦ ಮಂಜುನಾಥ್ ಎಸ್‌ಬಿಟಿ

ಅಕ್ಕಿ ವ್ಯಾಪಾರಸ್ಥರುಗಳಾದ :
♦ ಎ.ಆರ್ ಮಂಜುನಾಥ ♦ ಮುರುಗೇಶ್ ಯು.ಕೆ
♦ ಬಿಪಿಜಿ ಭರತ್ ♦ ಬಳ್ಳಾರಿ ಮಂಜು ♦ ಶಿವರಾಜ ಎ.ಡಿ.





# ನಿಗಮ - ಮಂಡಳಿ ನೇಮಕಕ್ಕೆ ಇನ್ನೂ ಮೀನಾಮೇಷ

ಬೆಂಗಳೂರು, ನ. 30 - ನಿಗಮ ಹಾಗೂ ಮಂಡಳಿಗಳಿಗೆ ಅಧ್ಯಕ್ಷರ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಇನ್ನೂ ಮೀನಾಮೇಷ ಎಣಿಸುತ್ತಿದೆ.

ಇಪ್ಪತ್ತು ನಿಗಮಗಳಿಗೆ ಅಧ್ಯಕ್ಷರ ನೇಮಕಾತಿಗೆ ಪಟ್ಟಿ ಅಂತಿಮಗೊಂಡಿದ್ದರೂ ವರಿಷ್ಠರ ಅನುಮತಿಗೆ ಪ್ರದೇಶ ಕಾಂಗ್ರೆಸ್ ಪಟ್ಟಿಯನ್ನೇ ರವಾನೆ ಮಾಡಿಲ್ಲ.

ಕಾರ್ಯಕರ್ತರನ್ನು ಕಡೆಗಣಿಸಿ ಪಕ್ಷದ ಹಿರಿಯ ಶಾಸಕರಿಗೆ ಮೊದಲ ಪಟ್ಟಿಯಲ್ಲಿ ಆದ್ಯತೆ ಕಲ್ಪಿಸಿದ್ದು ಅಸಮಾಧಾನಕ್ಕೆ ಕಾರಣವಾಗಿದೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅಧ್ಯಕ್ಷತೆಯಲ್ಲಿ ಮೂರು ದಿನಗಳ ಕಾಲ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕುಳಿತು ಚರ್ಚೆ ನಡೆಸಿ ಮೊದಲ ಪಟ್ಟಿ ಅಂತಿಮಗೊಳಿಸಿದ್ದರು.

ಸಚಿವ ಆಕಾಂಕ್ಷಿಗಳಾಗಿ ಮಂತ್ರಿಮಂಡಲದಲ್ಲಿ ಅವಕಾಶ ದೊರೆಯದ ಪಕ್ಷದ ಅತ್ಯಂತ ಹಿರಿಯ ಶಾಸಕರಿಗೆ ಅನುವು ಮಾಡಿಕೊಡಲಾಗಿದೆ.

ಹಿರಿಯರಿಗೆ ಮಾತ್ರ ಮಣೆ ಹಾಕಿ, ಕಿರಿಯರು ಮತ್ತು ಕಾರ್ಯಕರ್ತರನ್ನು ಕಡೆಗಾಣಿಸಲಾಗಿದೆ ಎಂಬ ಅಪಸ್ವರ ಕೇಳಿಬಂದಿದೆ. ಈ ಅಪಸ್ವರದ ನಡುವೆಯೇ ಪಟ್ಟಿ ಬಿಡುಗಡೆ ಮಾಡಲು ಕೆಪಿಸಿಸಿ ಅಧ್ಯಕ್ಷರು ಆಸಕ್ತಿ ತೋರಿಸಿದ್ದಲ್ಲದೆ ವರಿಷ್ಠರಿಗೆ ಪಟ್ಟಿ ರವಾನೆಯಾಗಿದೆ, ಅಲ್ಲಿಂದ ಅನುಮತಿ ದೊರೆತ ನಂತರ ಪ್ರಕಟಿಸಲಿದ್ದೇವೆ ಎಂದಿದ್ದರು.

ಶಿವಕುಮಾರ್ ಹೇಳಿಕೆ ನಂತರ ಪಕ್ಷದ ಕೆಲವು ಮುಖಂಡರು, ಕಾರ್ಯಕರ್ತರಿಗೂ ಅವಕಾಶ ಮಾಡಿಕೊಡಿ ಎಂದಿದ್ದಲ್ಲದೆ, ಬೆಳಗಾವಿಯಲ್ಲಿ ಜರುಗಲಿರುವ ಚಳಿಗಾಲದ ಅಧಿವೇಶನದ ನಂತರ ಪಟ್ಟಿ ಬಿಡುಗಡೆ ಮಾಡಿ ಎಂದು ಸಲಹೆ ಮಾಡಿದ್ದರು.

ನಿಗಮಗಳಿಗೆ ಅವಕಾಶ ದೊರೆಯದ ಶಾಸಕರು ಸಮಾವೇಶದ ವೇಳೆ ಅಪಸ್ವರ ಎತ್ತಬಹುದು, ಇಲ್ಲವೇ ಗುಂಪು ಸಭೆಗಳನ್ನು ನಡೆಸಬಹುದು ಈ ಬಗ್ಗೆ ಯೋಚಿಸಿ ನಿರ್ಧಾರ ಕೈಗೊಳ್ಳಿ ಎಂದಿದ್ದರು.

ಮುಖಂಡರ ಸಲಹೆ ಹಿನ್ನೆಲೆಯಲ್ಲಿ ನಿನ್ನೆ ಪ್ರಕಟಗೊಳ್ಳಬೇಕಿದ್ದ ಪಟ್ಟಿ ಇದುವರೆಗೂ ಬಿಡುಗಡೆ ಆಗಿಲ್ಲ, ಉನ್ನತ ಮೂಲಗಳ ಪ್ರಕಾರ ಪಟ್ಟಿ ವರಿಷ್ಠರಿಗೇ ತಲುಪಿಲ್ಲ.

ಸಚಿವ ಸ್ಥಾನ ಪ್ರಾತಿನಿಧ್ಯ ದೊರೆಯದ ಜಿಲ್ಲೆಗಳಲ್ಲಿನ ಹಿರಿಯ ಸದಸ್ಯರಿಗೆ ಪಟ್ಟಿಯಲ್ಲಿ ಮೊದಲ ಆದ್ಯತೆ ನೀಡಲಾಗಿದೆ.

ಜೊತೆಗೆ ಮೂರರಿಂದ ನಾಲ್ಕು ಬಾರಿ ವಿಧಾನಸಭೆ ಪ್ರವೇಶಿಸಿರುವ ಶಾಸಕರಿಗೂ ಅವಕಾಶ ನೀಡಲಾಗಿದೆ.

ಅದರಲ್ಲಿ ಕೆಲವು ಹಿರಿಯರು ನಿಗಮ ಸ್ಥಾನಗಳನ್ನು ವಹಿಸಿಕೊಳ್ಳಲು ನಿರಾಕರಿಸಿದ್ದಾರೆ. ಖುದ್ದಾಗಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳೇ ಇಂತಹವರನ್ನು ಸಂಪರ್ಕಿಸಿ ಅಧಿಕಾರ ವಹಿಸಿಕೊಳ್ಳುವಂತೆ ನೀಡಿದ ಸಲಹೆಯನ್ನೂ ನಯವಾಗಿ ತಳ್ಳಿಹಾಕಿದ್ದಾರೆ.

ಈಗ ಸಾಧ್ಯವಾಗದಿದ್ದರೆ, ಮುಂದಿನ ದಿನಗಳಲ್ಲಿ ನಮಗೆ ಸಚಿವ ಸ್ಥಾನಕ್ಕೆ ಅವಕಾಶ ಮಾಡಿಕೊಡಿ ಅಲ್ಲಿಯವರೆಗೂ ನಮಗೆ ಬೇರೆ ಅಧಿಕಾರ ಬೇಡ ಎಂದು ಸ್ಪಷ್ಟ ಪಡಿಸಿದ್ದಾರೆ.

ಈ ಮಧ್ಯೆ, ಲೋಕಸಭಾ ಚುನಾವಣೆ ನಂತರ ಕಾರ್ಯಕರ್ತರು ಮತ್ತು ಶಾಸಕರಿಗೆ ಉಳಿದ ನಿಗಮ-ಮಂಡಳಿಗಳನ್ನು ಸಮನಾಗಿ ಹಂಚಿಕೆ ಮಾಡಲು ಪಕ್ಷ ನಿರ್ಧರಿಸಿದೆ.

# ಕನಕದಾಸರ ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಬದುಕು ಸಾರ್ಥಕ



**ಹರಿಹರದ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್**

ಹರಿಹರ, ನ.30- ವಿಶ್ವ ಕಂಡ ಅಪ್ರತಿಮ ದಾರ್ಶನಿಕ, ತತ್ವಜ್ಞಾನಿ, ಭಕ್ತಿ ಪಂಥದ ಪ್ರಮುಖ ಹರಿದಾಸರಲ್ಲಿ ಒಬ್ಬರಾದ ಭಕ್ತ ಕನಕದಾಸರ ಚಿಂತನೆಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಹೋದಾಗ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಶಾಸಕ ಬಿ.ಪಿ. ಹರೀಶ್ ಅಭಿಪ್ರಾಯಪಟ್ಟರು.


ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಕನಕದಾಸರ ಜಯಂತಿ ಸಮಾರಂಭದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಕಾಲಜ್ಞಾನಿ, ವರ್ಗ ಹೋರಾಟದ ಹರಿಕಾರ ಎನಿಸಿಕೊಂಡ ಕನಕದಾಸರು, ಸಾಹಿತ್ಯದ ಮೂಲಕ ಜನಮಾನಸದಲ್ಲಿ ನೆಲೆಗೊಂಡಿದ್ದಾರೆ. ಅವರು ರಚಿಸಿದ ಮೋಹನ ತರಂಗಿಣಿ ಹರಿಭಕ್ತಸಾರ, ನಳ ಚರಿತ್ರೆ ಸೇರಿದಂತೆ ಅನೇಕ ಕಾವ್ಯಗಳನ್ನು ರಚಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆಯನ್ನು ನೀಡಿ ಅಜರಾಮರರಾಗಿದ್ದಾರೆ. ಸ್ವಜಾತಿ, ಸ್ವಮತ ಮನಸ್ಥಿತಿಯನ್ನು ಬಿಟ್ಟು, ಸಮಾಜದ ಒಳಿತಿಗಾಗಿ ಹೋರಾಟ ಮಾಡಿದ ಕೆಲವೇ ಕೆಲವು ಅಸಾಮಾನ್ಯ ವ್ಯಕ್ತಿಗಳಲ್ಲಿ ಸಂತ ಕನಕದಾಸರು ಒಬ್ಬರಾಗಿದ್ದಾರೆ. ತಮ್ಮ ಜೀವನದ ಅನುಭವಗಳ ಮೂಲಕ ಸಾಮಾಜಿಕ, ವೈಚಾರಿಕ, ಅಧ್ಯಾತ್ಮಿಕ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಮಾಜ ತಿದ್ದುವ ಕೈಂಕರ್ಯವನ್ನು ಕನಕದಾಸರು ಮಾಡಿದ್ದಾರೆ. ಜೊತೆಗೆ ಶೋಷಿತರ ನೋವುಗಳನ್ನು ಅರಿತು ಅವುಗಳಿಗೆ ಪರಿಹಾರವನ್ನು ಸೂಚಿಸುವ ಮೂಲಕ ಅವರನ್ನು ಮೇಲೆ ತರುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕಿದ್ದರು ಎಂದು ಹೇಳಿದರು.

ತಹಶೀಲ್ದಾರ್ ಗುರುಬಸವರಾಜಯ್ಯ ಮಾತನಾಡಿ, ಕನಕದಾಸರು ದೇಶೀಯತೆಯನ್ನು ಮೈಗೂಡಿಸಿಕೊಂಡು ಸಾಹಿತ್ಯ ಸರಳತೆಯೊಂದಿಗೆ ಸಮ ಸಮಾಜದ ಬೀಜವನ್ನು ಬಿತ್ತಿದ್ದಾರೆ. ವಾಸ್ತವತೆಯ ಕಠೋರ ಸತ್ಯಗಳನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸಿದವರು. ಇಂತಹ ಮಹಾನ್ ಮಾನವತಾವಾದಿಯ ಚಿಂತನೆಗಳನ್ನು ಇಂದಿನ ಯುವಕರು ಮೈಗೂಡಿಸಿಕೊಂಡು ತಮ್ಮ ಬದುಕನ್ನು ಉತ್ತಮ ರೀತಿಯಲ್ಲಿ ಕಟ್ಟಿಕೊಳ್ಳುವಂತೆ ಹೇಳಿದರು.

ಈ ಸಂದರ್ಭದಲ್ಲಿ ಗ್ರೇಡ್-2 ತಹಶೀಲ್ದಾರ್ ಶಶಿಧರಯ್ಯ, ಬಿಇಓ ಹನುಮಂತಪ್ಪ, ಕೃಷಿ ಇಲಾಖೆಯ ನಾರನಗೌಡ, ಬಿಸಿಎಂ ಇಲಾಖೆಯ ಪರ್ವೀನ್ ಬಾನು, ಸಿಡಿಪಿಓ ಇಲಾಖೆ ಪೂರ್ಣಿಮಾ, ತೋಟಗಾರಿಕೆ ಇಲಾಖೆ ಸಿದ್ದೇಶ್, ತಾಪಂ ಪ್ರಭಾರಿ ಇಓ ರಾಮಕೃಷ್ಣಪ್ಪ, ಪರಮೇಶ್ವರಪ್ಪ, ಕರಿಬಸಪ್ಪ ಮಠದ, ಎನ್ ಚಂದ್ರಪ್ಪ, ಬಿ.ಎನ್. ಗೌಡ, ರೇವಣಸಿದ್ದಪ್ಪ, ಹಾಲೇಶಪ್ಪ ಪೂಜಾರ್, ಗೋವಿಂದಪ್ಪ, ಕೆಂಚಪ್ಪ, ಪ್ರಕಾಶ್, ಕೃಷ್ಣಪ್ಪ, ಬೀರಪ್ಪ, ರುದ್ರಪ್ಪ, ಜಿಗಳಿ ಹನುಮಗೌಡ, ಶಿಕ್ಷಕ ಎ. ರಿಯಾಜ್ ಅಹ್ಮದ್, ಶಾಸಕರ ಆಪ್ತ ಸಹಾಯಕ ಶಿವಶಂಕರ್ ಚಿಕ್ಕಬಿದರಿ, ವಿ.ಎ.ಗಳಾದ ಹೇಮಂತ್ ಕುಮಾರ್, ವಿಜಯಕುಮಾರ್ ಮತ್ತು ಇತರರು ಹಾಜರಿದ್ದರು.

## ಮಲೇಬೆನ್ನೂರಿನಲ್ಲಿ ನಿಲ್ಲದ ಮುಷ್ಯಗಳ ಕಾಟ : ಮತ್ತೊಂದು ಮುಷ್ಯ ಸೆರೆ




ಮಲೇಬೆನ್ನೂರು, ನ.30- ಪಟ್ಟಣದಲ್ಲಿ ಮುಷ್ಯಗಳ ಉಪಟಳ ದಿನೇ ದಿನೇ ಹೆಚ್ಚಾಗುತ್ತಿದ್ದು, ಪ್ರತಿದಿನ ಒಬ್ಬರ ಮೇಲಾದರೂ ದಾಳಿ ಮಾಡಿ ಗಾಯಗೊಳಿಸುತ್ತಿವೆ. ಇದರಿಂದ ಪಟ್ಟಣದ ಜನತೆ ಬೇಸತ್ತು ಹೋಗಿದ್ದು, ಮುಷ್ಯಗಳ ಕಾಟದಿಂದ ಮುಕ್ತಿ ಯಾವಾಗ ಸಿಗುತ್ತದೆ ಎಂಬ ಚಿಂತೆಯಲ್ಲಿದ್ದಾರೆ.

ಈ ಹಿಂದೆ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದ 2 ಮುಷ್ಯಗಳನ್ನು ಪುರಸಭೆ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಶ್ರಮವಹಿಸಿ, ಪ್ರತ್ಯೇಕವಾಗಿ ಸೆರೆ ಹಿಡಿದು, ಶಿವಮೊಗ್ಗ ಸಮೀಪದ ಅರಣ್ಯಧಾಮಕ್ಕೆ ಬಿಟ್ಟಿದ್ದಾರೆ. ಏತನ್ಮಧ್ಯೆ, ಕಳೆದ 3-4 ದಿನಗಳಿಂದ ಮತ್ತೊಂದು ಮುಷ್ಯ 3-4 ಜನರ ಮೇಲೆ ದಾಳಿ ಮಾಡಿ, ಗಾಯಗೊಳಿಸಿದ್ದು, ಕೂಡಲೇ ಎಚ್ಚೆತ್ತ ಪುರಸಭೆ ಹಾಗೂ ಅರಣ್ಯ ಇಲಾಖೆಯವರು ಸೇರಿ ಆ ಮುಷ್ಯವನ್ನು ಗುರುವಾರ ಸೆರೆ ಹಿಡಿದಿದ್ದಾರೆ ಎಂದು ಮುದೇಗೌಡ್ರ ತಿಪ್ಪೇಶ್ ತಿಳಿಸಿದ್ದಾರೆ.

## ನಾಳೆ ಕಲಾವಿದೆ ಸಹನಾ ರಂಗ ಪ್ರವೇಶ





ದಾವಣಗೆರೆ,ನ.30 ನಗರದ ಕುವೆಂಪು ಕನ್ನಡ ಭವನದಲ್ಲಿ ನೃತ್ಯ ಕಲಾವಿದೆ ಕು. ಬಿ.ಸಹನಾ ಅವರ ಭರತನಾಟ್ಯ ರಂಗ ಪ್ರವೇಶ ಕಾರ್ಯಕ್ರಮ ಡಿಸೆಂಬರ್ 2ರಂದು ಜರುಗಲಿದೆ.

ಅಧ್ಯಕ್ಷತೆಯನ್ನು ಡಾ. ಎಸ್.ಎಸ್.ಎನ್. ಪಿ.ಎಸ್. ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ವಹಿಸುವರು. ಮುಖ್ಯ ಅತಿಥಿಗಳಾಗಿ ವಿಜಯಕರ್ನಾಟಕ ದಿನಪತ್ರಿಕೆ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ, ಬೆಂಗಳೂರಿನ ಬಿಎನ್‌ಎಂ ತಾಂತ್ರಿಕ ಕಾಲೇಜಿನ ಪ್ರೊ. ಡಾ.ಅಮಿತ್ ಶೇಖರ್, ಡಾ. ಎಸ್.ಎಸ್.ಎನ್. ಪಿ.ಎಸ್. ಶಾಲೆ ಮಾಜಿ ಪ್ರಾಂಶುಪಾಲರಾದ ಡಾ.ಪ್ರೀತಿ ಸಿಂಗ್, ಸಾಗರದ ನಾಟ್ಯ ತರಂಗ ಟ್ರಸ್ಟ್‌ನ ವಿದ್ವಾನ್ ಜಿ.ಬಿ.ಜನಾರ್ದನ್ ಮತ್ತು ಶ್ರೀಮತಿ ವರದಾಂಬಿಕ ಜನಾರ್ದನ್ ಮತ್ತು ಬಿಐಇಟಿ ಪ್ರಾಂಶುಪಾಲ ಹೆಚ್.ಬಿ.ಅರವಿಂದ್ ಆಗಮಿಸುವರು.

ಈ ರಂಗಪ್ರವೇಶ ಕಾರ್ಯಕ್ರಮದಲ್ಲಿ ನರ್ತಿಸುವ ಎಲ್ಲ ನೃತ್ಯ ಬಂಧುಗಳ ಸಾಹಿತ್ಯ, ರಚನೆ ಮತ್ತು ಸಂಗೀತ ಸಂಯೋಜನೆಯನ್ನು ಗುರುಗಳಾದ ರಾಜಗೋಪಾಲ ಭಾಗವತ ಮತ್ತು ಪೂರ್ಣಿಮಾ ಭಾಗವತರು ಮಾಡಿರುತ್ತಾರೆ.

**ಕಲಾವಿದೆ ಸಹನಾ ಪರಿಚಯ:** ವರ್ತಕರಾದ ಬಸವರಾಜ ಬನ್ನೆಟ್ಟಿ ಮತ್ತು ರೇಣುಕ ದಂಪತಿಯ ಪುತ್ರಿ ಸಹನಾ, ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾಶಾಲೆಯಲ್ಲಿ ತಮ್ಮ 10ನೇ ವಯಸ್ಸಿನಿಂದಲೇ ಗುರುಗಳಾದ ವಿದುಷಿ ಶ್ರೀಮತಿ ಪೂರ್ಣಿಮಾ ಭಾಗವತರ ಶಿಷ್ಯೆಯಾಗಿ ನೃತ್ಯ ಅಭ್ಯಾಸ ಮಾಡಿದ್ದಾರೆ. ಅಲ್ಲದೇ ವಿದ್ವಾನ್ ರಾಜಗೋಪಾಲ ಭಾಗವತರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದ್ದಾರೆ.

ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯ ಭರತನಾಟ್ಯ ಪರೀಕ್ಷೆ ಮತ್ತು ಸಂಗೀತ ಜ್ಯೂನಿಯರ್ ವಿಭಾಗದ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಮೈಸೂರು ದಸರಾ ಸೇರಿದಂತೆ, ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾರ್ಯಕ್ರಮ ನೀಡಿದ್ದಾರೆ. ಸಸ್ಯ ಶಾಸ್ತ್ರ ಅಧ್ಯಯನ ಮಾಡಿ ಎಂ.ಎಸ್.ಸಿ ಪದವಿ ಪಡೆದಿರುವ ಸಹನಾ, ನಗರದ ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸಿಬಿಎಸ್‌ಇ ಶಾಲೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಹೆಚ್. ಕಡಕಟ್ಟೆ ಗ್ರಾ.ಪಂ. ಉಪಾಧ್ಯಕ್ಷರಾಗಿ ಶಶಿಕಲಾ ಮಾಲತೇಶ್



ಹೊನ್ನಾಳಿ, ನ. 30 - ತಾಲ್ಲೂಕಿನ ಹೆಚ್. ಕಡದಕಟ್ಟೆ ಗ್ರಾಮ ಪಂಚಾಯತಿ ಉಪಾಧ್ಯಕ್ಷರಾಗಿ ಹೊಳೆ ಮಾದಾಪುರ ಗ್ರಾಮದ ಡಿ. ಶಶಿಕಲಾ ಮಾಲತೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿದ್ದ ಎಂ.ಡಿ. ಹನುಮಂತಪ್ಪ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಡೆದು, ಯಾರೂ ನಾಮಪತ್ರ ಸಲ್ಲಿಸದ ಕಾರಣ ಡಿ. ಶಶಿಕಲಾ ಮಾಲತೇಶ್ ಅವರು ಉಪಾಧ್ಯಕರಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ವಲಯ ಅರಣ್ಯ ವಲಯ ಅರಣ್ಯಾಧಿಕಾರಿ ಡಿ.ಎಂ. ಷಣ್ಮುಖ ಘೋಷಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಎ.ಹೆಚ್. ಪವಿತ್ರ ಗಣೇಶ್, ಸದಸ್ಯರಾದ ಹನುಮಂತಮ್ಮ, ಎಂ. ಮಂಜುನಾಥ, ಬಿ.ಹೆಚ್. ಕುಮಾರ್, ಎ.ಎಂ. ರಾಜೇಶ್, ಪಿಡಿಓ ಹೆಚ್ ವ್ಯ. ಹೊನ್ನಪ್ಪ, ಕಾರ್ಯದರ್ಶಿ ಬಿ. ಮಲ್ಲೇಶಪ್ಪ, ಸಿಬ್ಬಂದಿಗಳಾದ ಸಣ್ಣಬಸಪ್ಪ, ಡಿ. ಹೆಚ್.ಮಲ್ಲಿಕಾರ್ಜುನ್, ಹೆಚ್. ದಯಾನಂದ್, ಸಿ. ಪರಮೇಶ್ವರಪ್ಪ, ಬಿ.ಜಿ. ಶಿವರಾಜ್, ಬಿ.ಈ. ಚನ್ನಪ್ಪ, ಮುಖಂಡರಾದ ಕಡದಕಟ್ಟೆ ಮಂಜಪ್ಪ, ಹೊಳೆ ಮಾದಾಪುರ ಗ್ರಾಮದ ಮಾಲತೇಶ್, ಚಿಕ್ಕಪ್ಪ, ಲೋಕೇಶ್ ಮತ್ತಿತರರು ಇದ್ದರು.

## ಭಾರತದಲ್ಲಿ ವಾಯುಮಾಲಿನ್ಯದಿಂದ 21.80 ಲಕ್ಷ ಸಾವು

ನವದೆಹಲಿ, ನ. 30 - ಪ್ರತಿ ವರ್ಷ ಭಾರತದಲ್ಲಿ ವಾಯು ಮಾಲಿನ್ಯದ ಕಾರಣದಿಂದ 21.80 ಲಕ್ಷ ಸಾವುಗಳು ಸಂಭವಿಸುತ್ತಿವೆ ಎಂದು ಬಿ.ಎಂ.ಜೆ. ನಡೆಸಿದ ಅಧ್ಯಯನ ತಿಳಿಸಿದೆ. ಕೈಗಾರಿಕೆಗಳಲ್ಲಿ ಪಳೆಯುಳಿಕೆ ಇಂಧನ ಬಳಕೆ, ಜನರೇಟರ್‌ಗಳು ಹಾಗೂ ಸಾರಿಗೆ ಕಾರಣದಿಂದ ವಾಯು ಮಾಲಿನ್ಯ ಹೆಚ್ಚಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಶುದ್ಧ ಹಾಗೂ ನವೀಕರಿಸಬಹುದಾದ ಇಂಧನ ಬಳಕೆಯಿಂದ ಈ ಸಾವುಗಳನ್ನು ತಪ್ಪಿಸಬಹುದು ಎಂದೂ ವರದಿಯಲ್ಲಿ ತಿಳಿಸಲಾಗಿದೆ. ಜರ್ಮನಿಯ ಮ್ಯಾಕ್ಸ್ ಪ್ಲಾಂಕ್ ಇನ್‌ಸ್ಟಿಟ್ಯೂಷನ್ ಆಫ್ ಕೆಮಿಸ್ಟ್ರಿಯ ಸಂಶೋಧಕರು ನಡೆಸಿದ ಅಧ್ಯಯನದಲ್ಲಿ ಈ ಅಂಶ ತಿಳಿಸಲಾಗಿದೆ. ಜಾಗತಿಕವಾಗಿ ವಾಯು ಮಾಲಿನ್ಯದಿಂದ 51 ಲಕ್ಷ ಸಾವುಗಳು ಸಂಭವಿಸುತ್ತಿವೆ ಎಂದೂ ವರದಿಯಲ್ಲಿ ಹೇಳಲಾಗಿದೆ.

# 262 ಆಂಬ್ಯುಲೆನ್ಸ್‌ಗಳಿಗೆ ಸಿಎಂ ಸಿದ್ದರಾಮಯ್ಯ ಚಾಲನೆ

ಬೆಂಗಳೂರು, ನ. 30 - ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿರುವ ಗುಣಮಟ್ಟದ ಆರೋಗ್ಯ ಸೇವೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ದೊರೆಯುವಂತೆ ನೋಡಿಕೊಳ್ಳಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ಸರ್ಕಾರ ಎಲ್ಲಾ ಸವಲತ್ತುಗಳನ್ನು ಕೊಟ್ಟರೂ ನಮ್ಮ ಆಸ್ಪತ್ರೆಗಳ ಗುಣಮಟ್ಟ ಸುಧಾರಣೆ ಆಗಲೇ ಇಲ್ಲ. ಬಡವ-ಬಲ್ಲಿದ ಎನ್ನದೆ ಸೇವೆ ಬಯಸಿ ಬಂದವರಿಗೆ ತಾರತಮ್ಯ ಇಲ್ಲದೆ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಕಿವಿಮಾತು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಧಾನಸೌಧದ ಗ್ರಾಂಡ್ ಸ್ಟೆಪ್ಸ್ ಮೇಲೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 262 ಆಧುನಿಕ ಜೀವ ರಕ್ಷಕ ಆಂಬ್ಯುಲೆನ್ಸ್‌ಗಳನ್ನು ಜನಸೇವೆಗೆ ಅರ್ಪಿಸಿ ಮಾತನಾಡಿದ ಅವರು, ಹಳೆ ಬಟ್ಟೆ - ಕೊಳಕು ಬಟ್ಟೆ ಹಾಕಿಕೊಂಡು ಬರುವ ಬಡವರನ್ನೂ ಮಾನವೀಯವಾಗಿ ನಡೆಸಿಕೊಳ್ಳಿ ಎಂದಿದ್ದಾರೆ. ನಾಡಿನ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡಲು ಸರ್ಕಾರ ಬದ್ಧವಾಗಿದೆ. ಚಿಕಿತ್ಸೆ ಸಿಗದೆ ಯಾರೂ ಪ್ರಾಣ ಕಳೆದುಕೊಳ್ಳುವಂತಾಗಬಾರದು ಎನ್ನುವ ಕಾರಣಕ್ಕೆ ತುರ್ತು 108 ಆಂಬ್ಯುಲೆನ್‌ಗಳನ್ನು ಆರೋಗ್ಯ ಸೇವೆಗೆ ಒದಗಿಸಲಾಗಿದೆ.

ರಾಜ್ಯದಲ್ಲಿ 840 ಕ್ಕೂ ಹೆಚ್ಚು ಆಂಬ್ಯುಲೆನ್ಸ್‌ಗಳ ಅಗತ್ಯವಿದೆ. ಪ್ರತೀ ತಾಲ್ಲೂಕಿನಲ್ಲಿ 4 ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಾ ಪ್ರತಿದಿನ ನೂರಾರು ಮಂದಿಗೆ ತುರ್ತು ಆರೋಗ್ಯ ಸೇವೆ ಒದಗಿಸುತ್ತಿವೆ. ಪ್ರಾಥಮಿಕ ತುರ್ತು ಚಿಕಿತ್ಸೆ ಪ್ರಾಣ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ವಿವರಿಸಿದರು.

ಪ್ರತಿ ಜಿಲ್ಲೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ಇರಬೇಕು. ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್‌ಗಳಲ್ಲಿ ಸೇವಾ ವೆಚ್ಚ ದುಬಾರಿ ಆಗಿರುವುದರಿಂದ ಬಡವರಿಗೆ ಬಹಳ ಕಷ್ಟ ಆಗುತ್ತಿದೆ. ಈ ಕಾರಣಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಗೆ ಸಾವಿರಾರು ಮಂದಿ ಬೇಡಿಕೆ ಅರ್ಜಿ ಕೊಡುತ್ತಿದ್ದಾರೆ ಎಂದವರು ಹೇಳಿದರು. ಸರ್ಕಾರ ಮತ್ತಷ್ಟು ಸವಲತ್ತುಗಳನ್ನು ಕೊಡಲು ಸಿದ್ಧ, ನೀವು ಅದನ್ನು ಬಳಕೆ ಮಾಡಿ ನಮ್ಮ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಉತ್ತಮ ಸೇವೆ ಕಲ್ಪಿಸಲು ಗಮನಕೊಡಿ ಎಂದು ವೇದಿಕೆಯಲ್ಲೇ ಇದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಸಲಹೆ ನೀಡಿದರು.

## ನಗರದಲ್ಲಿ ನಾಳೆ ಮಕ್ಕಳಿಗಾಗಿ ವಿವಿಧ ಸ್ಪರ್ಧೆ

ದಾವಣಗೆರೆ, ನ. 30-ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾ ಬಾಲಭವನ ಸೊಸೈಟಿ ವತಿಯಿಂದ ನಗರದ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿರುವ ಆವರಣದಲ್ಲಿ ಡಿಸೆಂಬರ್ 2 ರಂದು ಬೆಳಿಗ್ಗೆ 10 ಗಂಟೆಗೆ ಮಕ್ಕಳಿಗಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಚಿತ್ರಕಲೆ, ಜಾನಪದ ನೃತ್ಯ (ಗ್ರೂಪ್ ಡಾನ್ಸ್), ದೇಶ ಭಕ್ತಿಗೀತೆ ಹಾಗೂ ಮೆಮೋರಿ ಆಟ ಇತರೆ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, 6 ರಿಂದ 16 ವರ್ಷದೊಳಗಿನ ಮಕ್ಕಳು ಭಾಗವಹಿಸಬಹುದಾಗಿದೆ. ಆಸಕ್ತರು ಡಿಸೆಂಬರ್ 1 ರೊಳಗಾಗಿ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿರುವ ಜಿಲ್ಲಾ ಬಾಲ ಭವನದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ. 9964496242 ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

## ನಿಸ್ವಾರ್ಥ ಸೇವೆಯ ಶಾಮನೂರು ಹಳ್ಳಿಗೌಡ್ರು ರಾಮಚಂದ್ರಪ್ಪ ಇನ್ನಿಲ್ಲ



ದಾವಣಗೆರೆ, ನ.30- ತಮ್ಮ ನಿಸ್ವಾರ್ಥ ಸೇವೆಯ ಮೂಲಕವೇ ಶಾಮನೂರು ಸೇರಿದಂತೆ, ಸುತ್ತ ಮುತ್ತಲಿನ ಗ್ರಾಮಗಳಲ್ಲೂ ಗುರುತಿಸಿಕೊಂಡಿದ್ದ ಹಳ್ಳಿಗೌಡ್ರು ರಾಮಚಂದ್ರಪ್ಪ ಗುರುವಾರ ಮುಂಜಾನೆ 4.30ಕ್ಕೆ ವಿಧಿವಶರಾಗಿದ್ದಾರೆ.

ರಾಮಚಂದ್ರಪ್ಪ ಅವರಿಗೆ 94 ವರ್ಷವಾಗಿತ್ತು. ಅವರು, ರೈತ ಮುಖಂಡ ಹೆಚ್.ಆರ್. ಲಿಂಗರಾಜ್ ಶಾಮನೂರು ಅವರ ತಂದೆ. ಸಂಜೆ 3.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿತು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಶಾಸಕ ಬಿ.ಪಿ. ಹರೀಶ್, ಕೊಂಡಜ್ಜಿ ಶಾನುಭೋಗರು, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ್, ಎರೇಬೂದಿಹಾಳ್‌ನ ಗೌಡ್ರ ರಾಮಚಂದ್ರಪ್ಪ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎ.ಎಂ. ಮಂಜುನಾಥ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಗೌಡ್ರ ಮಂಜುನಾಥ್, ಭದ್ರಾ ಕಾಡಾ ನೀರು ಬಳಕೆದಾರರ ಮಹಾ ಮಂಡಳದ ಅಧ್ಯಕ್ಷ ದ್ಯಾವಪ್ಪ ರೆಡ್ಡಿ, ದೂಡಾ ಮಾಜಿ ಅಧ್ಯಕ್ಷ ಜಿ.ಹೆಚ್. ರಾಮಚಂದ್ರಪ್ಪ, ಗುಂಟನೂರು ಜಯದೇವಪ್ಪ, ಸ್ಫೂರ್ತಿ ಸೇವಾ ಟ್ರಸ್ಟ್ ಅಧ್ಯಕ್ಷ ಸತ್ಯನಾರಾಯಣ ಮೂರ್ತಿ, ಶಿರಮಗೊಂಡನಹಳ್ಳಿ ವೀರೇಂದ್ರ ಪಾಟೀಲ್, ಸಂಕೋಳ್ ಚಂದ್ರಶೇಖರಪ್ಪ, ಕೃಷಿಕ ಸಮಾಜದ ಅಧ್ಯಕ್ಷ ಎ.ಆರ್. ಶಿವಪ್ಪ, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ವೈ. ವಸಂತಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್. ಮೃತ್ಯುಂಜಯಪ್ಪ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷರುಗಳಾದ ಯರಗುಂಟಿ ವೀರಣ್ಣ, ಹೆಚ್. ಪರಮೇಶ್ವರಪ್ಪ, ದಾಮ್ಕೋಸ್ ಸಂಸ್ಥಾಪಕ ಅಧ್ಯಕ್ಷ ಜಯ್ಯಣ್ಣ ಸೇರಿದಂತೆ ಇತರರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.


ಪ್ರಾಥಮಿಕ ಶಾಲಾ ಶಿಕ್ಷಕರ ಪುತ್ರರಾಗಿದ್ದ ಇವರು, ಎಸ್ಸೆಸ್ಸೆಲ್ಸಿ ವರೆಗೆ ವಿದ್ಯಾಭ್ಯಾಸ ಮಾಡಿ ಮತ್ತೆ ಕೃಷಿಯನ್ನೇ ತಮ್ಮ ಉಸಿರಾಗಿಸಿಕೊಂಡಿದ್ದರು. ಜೊತೆಗೆ ಸಮಾಜ ಸೇವೆಯಲ್ಲೂ ಮುಂಚೂಣಿಯಲ್ಲಿದ್ದರು. ಜೀವನದ ಕೊನೆ ಕ್ಷಣದವರೆಗೂ ಎತ್ತುಗಳ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದರು.

ರಾಜಕೀಯ ಕ್ಷೇತ್ರಕ್ಕೆ ಕಾಲಿಡುವ ಅಥವಾ ಪ್ರಶಸ್ತಿಗಳನ್ನು ಪಡೆಯುವ ಬಗ್ಗೆ ಯೋಚನೆಯನ್ನೂ ಮಾಡದ ಇವರು, ಗ್ರಾಮದಲ್ಲಿ ನಡೆಯುವ ದೇವರ ಕಾರ್ಯಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು.

ಬರಿಗಾಲಿನಲ್ಲಿಯೇ ನಡೆಯುತ್ತಿದ್ದ ಹಾಗೂ ಹೆಚ್ಚಾಗಿ ಬನಿಯನ್ ಮೇಲೆಯೇ ಇರುತ್ತಿದ್ದ ಇವರು ಗ್ರಾಮದಲ್ಲಿ ಯಾವುದೇ ವಿವಾಹ ಕಾರ್ಯವಾದರೂ ಚಪ್ಪರ ಹಾಕುವುದರಿಂದ ಹಿಡಿದು ಮದುವೆ ಮುಗಿಯುವವರೆಗೂ ಮನೆಯವರಿಗೆ ಬೆನ್ನೆಲುಬಾಗಿರುತ್ತಿದ್ದರು. ಅಷ್ಟೇ ಅಲ್ಲ, ಗ್ರಾಮದಲ್ಲಿ ಯಾರೇ ಮೃತಪಟ್ಟರೂ ಕುಟುಂಬಕ್ಕೆ ಸಾಂತ್ವನ ಹೇಳುವ ಜೊತೆ, ಅಂತ್ಯ ಸಂಸ್ಕಾರದ ಎಲ್ಲಾ ಕಾರ್ಯಗಳಲ್ಲೂ ಪಾಲ್ಗೊಳ್ಳುತ್ತಿದ್ದ ವ್ಯಕ್ತಿ.

ಸಾರ್ವಜನಿಕ ರಂಗದಲ್ಲಿದ್ದೂ ಸರ್ಕಾರಿ ಪ್ರಾಥಮಿಕ ಶಾಲೆಗೆ ಎಸ್‌ಡಿಎಂಸಿ ಅಧ್ಯಕ್ಷರಾಗಿ, ಮುದ್ನಾಳು ಮಹೇಶ್ವರ ದೇವಸ್ಥಾನ ಕಮಿಟಿ ಅಧ್ಯಕ್ಷರಾಗಿ ಜವಾಬ್ದಾರಿ ಹೊತ್ತಿದ್ದರು.


**ದಾವಳಗಿ ಬಸವರಾಜಪ್ಪ ನಿಧನ**



ದಾವಣಗೆರೆ ಪಿ.ಜೆ. ಬಡಾವಣೆ ಮೋದಿ ಕೌಂಪೌಂಡ್ ರಸ್ತೆ ವಾಸಿ ಹತ್ತಿಕಾಳು ವ್ಯಾಪಾರಸ್ಥರಾದ **ದಾವಳಗಿ ಬಸವರಾಜಪ್ಪ** ಇವರು ದಿನಾಂಕ : 30.11.2023ರ ಗುರುವಾರ ಸಂಜೆ 6.15ಕ್ಕೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 01.12.2023ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಶಾಮನೂರು (ಗ್ಲಾಸ್ ಹೌಸ್ ಪಕ್ಕ) ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : ದಾವಳಗಿ ಬಂಧು-ಮಿತ್ರರು - 89707 11873**



॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥ ॥ ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ತಾ॥ ಶಿರಮಗೊಂಡನಹಳ್ಳಿ ಗ್ರಾಮದ ವಾಸಿ **ಶ್ರೀ ಕೆ.ಆರ್. ಸುಭಾಷ್ ಮತ್ತು ಶ್ರೀ ಕೆ.ಆರ್. ಅಜ್ಜಯ್ಯ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 23.11.2023ನೇ ಗುರುವಾರ ಬೆಳಗಿನ ಜಾವ 5.15ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಶಾಂತಮ್ಮನವರು**

(ದಿ॥ ಶ್ರೀ ಕೆ. ರಾಮಚಂದ್ರಪ್ಪನವರ ಧರ್ಮಪತ್ನಿ)

ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 01.12.2023ನೇ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ದಾವಣಗೆರೆ ತಾ॥ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ : ಮೊ : 7813964360 , 9108153565**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



**ಲಿಂಗದಹಳ್ಳಿ ಗೌಡ್ರು ಮಲ್ಲಪ್ಪ ನಿಧನ**



ದಾವಣಗೆರೆ ತಾ॥ ಲಿಂಗದಹಳ್ಳಿ ಗ್ರಾಮದ ವಾಸಿ ಗೌಡ್ರು ಮಲ್ಲಪ್ಪ (95) ದಿನಾಂಕ : 30.11.2023ನೇ ಗುರುವಾರ ಸಂಜೆ 6.10 ಗಂಟೆಗೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 1.12.2023ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮವಾದ ದಾವಣಗೆರೆ ತಾ॥ ಲಿಂಗದಹಳ್ಳಿಯಲ್ಲಿ ನೆರವೇರಿಸಲಾಗುವುದು.



॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಐದನೇ ವರ್ಷದ ಪುಣ್ಯಸ್ಮರಣೆ**



**ಶ್ರೀ ಮುದೇಗೌಡ್ರು ಶಿವಯೋಗಿ** ಅವರು

ಲಿಂಗೈಕ್ಯ : 01.12.2018

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಪ್ರತಿ ದಿನ, ಪ್ರತಿಕ್ಷಣ ನಿಮ್ಮನ್ನು ನೆನೆಯುತ್ತಾ,
ನೀವು ತೋರಿದ ಅದಮ್ಯ ಪ್ರೀತಿಯನ್ನು ಸ್ಮರಿಸುತ್ತಾ,
ನೀವು ಜೀವನದಲ್ಲಿ ಬದುಕಿದ ರೀತಿಯೇ ನಮಗೆ ಮಾರ್ಗದರ್ಶನ.

ಇಂತಿ ಕುಟುಂಬ ವರ್ಗ :

ಪತ್ನಿ : **ಶೈಲಾ ಮುದೇಗೌಡ್ರು ಶಿವಯೋಗಿ**

ಮಕ್ಕಳಾದ : **ಚಿ॥ ಸಚಿನ್, ಚಿ॥ ಸ್ವರೂಪ್**

**ಮುದೇಗೌಡ್ರು ಸಿದ್ದಲಿಂಗಪ್ಪ ಮತ್ತು ಮಕ್ಕಳು**

**ಹಿರಿಯೂರು ಲೋಕೇಶಪ್ಪಗೌಡ್ರು ಮತ್ತು ಮಕ್ಕಳು.**



॥ ಶ್ರೀ ಕೂಡಲ ಸಂಗಮೇಶ್ವರ ಪ್ರಸನ್ನ ॥

**ಭಾವಪೂರ್ಣ ಶ್ರದ್ಧಾಂಜಲಿ**



ಶ್ರೀ ದೇವರಮನಿ ಗುರುಪುತ್ರ (ಚಿನ್ನಿ)
ಜನನ : 02-02-1973 ಮರಣ : 30-11-2023

ದಿನಾಂಕ 30-11-2023 ನೇ ಗುರುವಾರ ಬೆಳಗಿನ ಜಾವ 1-30 ಗಂಟೆಗೆ ನನ್ನ ತಮ್ಮನಾದ

**ಶ್ರೀ ದೇವರಮನಿ ಗುರುಪುತ್ರ (ಚಿನ್ನಿ)**

(ಲಿಂ. ಶ್ರೀಮತಿ ಪಾರ್ವತಮ್ಮ ಶ್ರೀ ದೇವರಮನಿ ಮಹಾಲಿಂಗಪ್ಪನವರ ದ್ವಿತೀಯ ಪುತ್ರ)

ಲಿಂಗೈಕ್ಯರಾಗಿದ್ದು ಇವರ ಅಂತ್ಯಸಂಸ್ಕಾರವನ್ನು ಇಂದು ಸಂಜೆ ನೆರವೇರಿಸಲಾಯಿತು. ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 08-12-2023 ನೇ ಶುಕ್ರವಾರ ಮಧ್ಯಾಹ್ನ 12-00 ಗಂಟೆಗೆ, ಶ್ರೀ ದಾನಮ್ಮದೇವಿ ದೇವಸ್ಥಾನ ಆವರಣ, ದೊಡ್ಡಪೇಟೆ, ದಾವಣಗೆರೆ ಇಲ್ಲಿ ನೆರವೇರಿಸಲಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಪತ್ನಿ ಶ್ರೀಮತಿ ಮೀನಾಕ್ಷಿ ಮತ್ತು ಮಗ, ಶ್ರೀಮತಿ ಶ್ರೀ ದೇವರಮನಿ ಚನ್ನಬಸಪ್ಪ, ಸಹೋದರಿಯರು,

**ಅಜ್ಜಂಪುರಶೆಟ್ರು ವಂಶಸ್ಥರು, ದೇವರಮನಿ ವಂಶಸ್ಥರು ಹಾಗೂ ಬಂಧು-ಮಿತ್ರರು**


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಐದು ದೇಶಗಳಿಗೆ ಗೋಧಿ, ಅಕ್ಕಿ ರಫ್ತಿಗೆ ಅನುಮತಿ**
ನವದೆಹಲಿ : ಭೂತಾನ್, ಮಾಲಿ, ಇಂಡೋನೇಷಿಯ, ಸೆನೆಗಲ್ ಹಾಗೂ ಗಾಂಬಿಯಾ ದೇಶಗಳಿಗೆ ಸೀಮಿತ ಪ್ರಮಾಣದಲ್ಲಿ ಗೋಧಿ, ಗೋಧಿ ಹಿಟ್ಟು ಹಾಗೂ ನುಚ್ಚಕ್ಕಿ ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ನ್ಯಾಷನಲ್ ಕೋಆಪರೇಷನ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಮೂಲಕ ರಫ್ತು ಕೈಗೊಳ್ಳಲಾಗುವುದು.

**ಸಂಸದರ ವಿದೇಶಿ ಭೇಟಿಗೆ ಕಟ್ಟುನಿಟ್ಟಿನ ಮಾರ್ಗಸೂಚಿ**
ನವದೆಹಲಿ : ವಿದೇಶಗಳಿಗೆ ಖಾಸಗಿ ಭೇಟಿ ನೀಡಿದ ಸಂದರ್ಭದಲ್ಲಿ ಸಂಸದರು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಿದೇಶಿ ಆತಿಥ್ಯ ಸ್ವೀಕರಿಸುವುದಕ್ಕೆ ಮುಂಚೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಎಂದು ಹೊಸ ಆದೇಶ ಹೊರಡಿಸಲಾಗಿದೆ. ರಾಜ್ಯಸಭಾ ಕಾರ್ಯಾಲಯವು ಈ ಬಗ್ಗೆ ಸರಣಿ ಅಧಿಸೂಚನೆ ಹೊರಡಿಸಿದೆ.

**ಜೋಶಿಮಠಕ್ಕಾಗಿ ಕೇಂದ್ರದಿಂದ 1,658.17 ಕೋಟಿ ರೂ.**
ನವದೆಹಲಿ : ಉತ್ತರಾಖಂಡದ ಜೋಶಿಮಠದ ಪುನರ್‌ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ 1,658.17 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಸಮ್ಮತಿಸಿದೆ. ಭೂಕುಸಿತದಿಂದ ಜೋಶಿಮಠಕ್ಕೆ ತೀವ್ರ ಹಾನಿಯಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ನೇತೃತ್ವದಲ್ಲಿ ನಡೆದ ಉನ್ನತ ಹಂತದ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ.

**ಕಣ್ಣೂರು ವಿ.ವಿ. ಕುಲಪತಿ ನೇಮಕ ರದ್ದುಗೊಳಿಸಿದ ಸುಪ್ರೀಂ ಕೋರ್ಟ್**
ನವದೆಹಲಿ : ಗೋಪಿನಾಥ ರವೀಂದ್ರನ್ ಅವರನ್ನು ಕೇರಳದ ಕಣ್ಣೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಪುನರ್ ನೇಮಿಸಿದ್ದನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ. ಕೇರಳ ಸರ್ಕಾರ ಈ ವಿಷಯದಲ್ಲಿ ಅನಗತ್ಯವಾಗಿ ಮಧ್ಯ ಪ್ರವೇಶಿಸಿದೆ ಎಂದು ನ್ಯಾಯಾಲಯ ಆಕ್ಷೇಪಿಸಿದೆ. ಅಲ್ಲದೇ, ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಕುಲಾಧಿಪತಿಯಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಿಲ್ಲ ಎಂದು ಟೀಕಿಸಿದೆ.

**ಅಮೆರಿಕದ ಹೆನ್ರಿ ಕಿಸಿಂಜರ್ ನಿಧನ**
ವಾಷಿಂಗ್ಟನ್ : ಅಮೆರಿಕದ ಹಿರಿಯ ರಾಯಭಾರಿಯಾಗಿದ್ದ ಹೆನ್ರಿ ಕಿಸಿಂಜರ್ 100ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. 1970ರ ವೇಳಗೆ ಭಾರತದ ನಾಯಕತ್ವವನ್ನು ಕೀಳಾಗಿ ಕಂಡಿದ್ದಕ್ಕಾಗಿ ಅವರು ಕುಖ್ಯಾತರಾಗಿದ್ದರು. ಭಾರತೀಯರು ಹಾಗೂ ಆಗಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರ ಬಗ್ಗೆ ಅಪಶಬ್ದಗಳನ್ನೂ ಬಳಸಿದ್ದರು.

**ಪ್ಯಾಲೆಸ್ತೇನ್ ಬಂದೂಕುಧಾರಿಯಿಂದ ಮೂವರು ಇಸ್ರೇಲಿಗಳ ಹತ್ಯೆ**
ಜೆರುಸಲೇಂ : ಪ್ಯಾಲೆಸ್ತೇನ್ ಬಂದೂಕುಧಾರಿಯೋರ್ವ ಇಲ್ಲಿನ ಬಸ್ ನಿಲ್ದಾಣದಲ್ಲಿ ಗುಂಡು ಹಾರಿಸಿ ಮೂವರು ಇಸ್ರೇಲಿಯರನ್ನು ಹತ್ಯೆ ಮಾಡಿದ್ದಾನೆ ಹಾಗೂ ಇತರೆ ಆರು ಜನರನ್ನು ಗಾಯಗೊಳಿಸಿದ್ದಾನೆ. ಇದರಿಂದಾಗಿ ಕಳೆದ ಏಳು ದಿನಗಳಿಂದ ಈ ಪ್ರದೇಶದಲ್ಲಿ ನೆಲೆಸಿದ್ದ ಶಾಂತಿಗೆ ಭಂಗವಾಗಿದೆ.

# ಪತ್ರಕರ್ತರು ಜನರ ಜ್ವಲಂತ ಸಮಸ್ಯೆಗಳಿಗೆ ಧ್ವನಿಯಾಗಲಿ

## ಜಗಳೂರಿನ ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ



ಜಗಳೂರು, ನ.30- ಪತ್ರಕರ್ತರು ಎಲ್ಲಾ ವರ್ಗದ ಜನರ ಜ್ವಲಂತ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡಬೇಕು ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಕರೆ ನೀಡಿದರು.

ಪಟ್ಟಣದ ಬಯಲು ರಂಗಮಂದಿರದ ಆವರಣದಲ್ಲಿ ನೂತನ ಕರ್ನಾಟಕ ಎಸ್ಸಿ-ಎಸ್ಟಿ ಪತ್ರಿಕಾ ವರದಿಗಾರರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್‌ರವರ ವಿಶಿಷ್ಟ ಸಂವಿಧಾನದ ಆಶಯಗಳನ್ನು ನಾವು ತಿಳಿದು ಅನುಸರಿಸದೇ, ನಮಗೆ ನಾವೇ ಶೋಷಣೆ ಮಾಡಿಕೊಳ್ಳುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಎಸ್ಸಿ-ಎಸ್ಟಿ ಶೋಷಿತ ಸಮುದಾಯಗಳಿಗೆ ಶಿಕ್ಷಣದ ಹಕ್ಕು ಸಿಕ್ಕಿದ್ದು, ನಾವುಗಳು ಪರಿಪೂರ್ಣ ಅಭಿವೃದ್ಧಿ ಕಂಡಿಲ್ಲ ಎಂದರು.

ಮೌಢ್ಯ, ಕಂದಾಚಾರ ಸಮಾಜದಲ್ಲಿ ಮನೆ ಮಾಡಿದೆ. ನೂತನ ಎಸ್ಸಿ-ಎಸ್ಟಿ ಕ್ಷೇಮಾಭಿವೃದ್ಧಿ ಸಂಘಟನೆ ಪದಾಧಿಕಾರಿಗಳು ಸಮಾಜ ಪರಿವರ್ತನೆಗೆ ಭದ್ರ ಬುನಾದಿಯಾಗಲಿ, ಎಸ್ಸಿ-ಎಸ್ಟಿ ಪತ್ರಿಕಾ ವರದಿಗಾರರು ಮುಂದಿನ ದಿನಗಳಲ್ಲಿ ಎಲ್ಲಾ ವರ್ಗದ ಜನರ ನೋವಿಗೆ ಮಿಡಿಯುವ ನಾಡಿಮಿಡಿತವಾಗಿ ಸ್ವಾಸ್ಥ್ಯ ಸಮಾಜ ಕಟ್ಟುವ ನಿಟ್ಟಿನಲ್ಲಿ ಮಾದರಿ ಸಂಘಟನೆಯಾಗಿ ಬೆಳೆಯಲಿ.

ನಿಮ್ಮ ಮೂಲಭೂತವಾದ ಹಕ್ಕಿಗಾಗಿ ನಿರಂತರ ಹೋರಾಟ ಅನಿವಾರ್ಯ.ನಾವು ಕೂಡ ಸರ್ಕಾರದಲ್ಲಿ ಚರ್ಚೆ ಮಾಡುವುದರ ಜೊತೆಗೆ ಸಂಬಂಧಿಸಿದ ವಾರ್ತಾ ಇಲಾಖೆ, ಎಸ್ಸಿ-ಎಸ್ಟಿ ಕಲ್ಯಾಣ ಮಂಡಳಿ ಇಲಾಖೆಗಳ ಮೂಲಕ ತಮ್ಮ ಸೌಲಭ್ಯಗಳನ್ನು ಪಡೆಯಲು ಮುಖ್ಯಮಂತ್ರಿಗಳ ಬಳಿ ಚರ್ಚೆ ನಡೆಸುತ್ತೇವೆ ಎಂದರು.

ಶಾಸಕ ಬಿ. ದೇವೇಂದ್ರಪ್ಪ ಮಾತನಾಡಿ, ಎಸ್ಸಿ-ಎಸ್ಟಿ ಪತ್ರಿಕಾ ವರದಿಗಾರರ ಸಂಘಕ್ಕೆ ನಮ್ಮ ಸಂಪೂರ್ಣ ಸಹಕಾರವಿದ್ದು, ನಿಮ್ಮ ನೈಜ, ನಿರಂತರ ವರದಿಗಾರಿಕೆ ಮೂಲಕ ಸಮಾಜದ ಕಣ್ಣು ತೆರೆಸುವಂತಾಗಲಿ. ಮಾನವ ಬಂಧುತ್ವ ವೇದಿಕೆ ರೂವಾರಿಗಳು, ಸಚಿವರಾದ ಸತೀಶ್ ಜಾರಕಿಹೊಳಿಯವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡ ಸಂಘ, ಮುಗಿಲೆತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕೂಡ್ಲಿಗಿ ಶಾಸಕ ಶ್ರೀನಿವಾಸ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಪತ್ರಕರ್ತರ ಧ್ವನಿ ಸಂಘದ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ್, ಹಿರಿಯ ಪತ್ರಕರ್ತ ಬಸವರಾಜ್ ದೊಡ್ಡಮನಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಇನ್‌ಸೈಟ್ ಫೌಂಡೇಷನ್ ಜಿ.ಬಿ. ವಿನಯ್ ಕುಮಾರ್, ಕಲ್ಲೇಶ್‌ರಾಜ್ ಪಟೇಲ್, ಹೊದಿಗೆರೆ ರಮೇಶ್, ಎ.ಬಿ. ರಾಮಚಂದ್ರಪ್ಪ, ತಹಶೀಲ್ದಾರ್ ಸೈಯದ್ ಖಲೀಂ ಉಲ್ಲಾ, ಎಸ್ಸಿ-ಎಸ್ಟಿ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಬಸವರಾಜ್ ಮತ್ತು ಪದಾಧಿಕಾರಿಗಳು ಇದ್ದರು.

# ಡಿ.3ರಂದು 'ನಾರೀ ಶಕ್ತಿ ಸಂಗಮ' ಮಹಿಳಾ ಸಮ್ಮೇಳನ

ದಾವಣಗೆರೆ, ನ.30-ಮಹಿಳಾ ಸಮನ್ವಯ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆ ಹಾಗೂ ಸೇವಾ ಭಾರತಿ ಟ್ರಸ್ಟ್ ಸಹಯೋಗದಲ್ಲಿ ಡಿ. 3ರಂದು ಬೆಳಿಗ್ಗೆ 8ರಿಂದ ಸಂಜೆ 4 ಗಂಟೆವರೆಗೆ ನಗರದ ಶ್ರೀ ಅಭಿನವ ರೇಣುಕ ಮಂದಿರದಲ್ಲಿ 'ನಾರೀ ಶಕ್ತಿ ಸಂಗಮ' ಮಹಿಳಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಮಹಿಳಾ ಸಮನ್ವಯದ ಶಿವಮೊಗ್ಗ ವಿಭಾಗದ ಸಂಚಾಲಕಿ ವೀಣಾ ಸತೀಶ್ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ. 3ರಂದು ಬೆಳಗ್ಗೆ 9.15ಕ್ಕೆ ಪ್ರದರ್ಶಿನಿಯನ್ನು ಪಿಎಸ್‌ಐ ಎಂ.ಆರ್ ಚೌಬೆ ಹಾಗೂ ಹಿರಿಯ ಸಂಗೀತ ಶಿಕ್ಷಕಿ ವಿಜಯಾ ವೆಂಕಣ್ಣ ಜೋಷಿ ನೆರವೇರಿಸುವರು. ನಂತರ 10.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಉದ್ಘಾಟಿಸುವರು.

'ಭಾರತದ ಚಿಂತನೆಯಲ್ಲಿ ಮಹಿಳೆ' ವಿಷಯ ಕುರಿತು ಮುಖ್ಯ ವಕ್ತಾರೆ ಹಾಗೂ ಬರಹಗಾರ್ತಿ ವಿಜಯಲಕ್ಷ್ಮಿ ಬಾಳೆಕುಂದ್ರಿ ಮಾತನಾಡುವರು. ಹಿರಿಯ ಪ್ರಸೂತಿ ತಜ್ಞರಾದ ಡಾ.ಶಾಂತಾ ಭಟ್ ಅಧ್ಯಕ್ಷತೆ ವಹಿಸುವರು. ಸೇವಾ ಭಾರತಿ ಟ್ರಸ್ಟ್ ಅಧ್ಯಕ್ಷ ಜಿ.ಎಸ್ ಉಮಾಪತಿ ಉಪಸ್ಥಿತರಿರುವರು ಎಂದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಉಪನ್ಯಾಸಕಿ ಸುಮತಿ ಜಯಪ್ಪ ಭಾಗವಹಿಸುವರು. ರಾಷ್ಟ್ರ ಸೇವಿಕಾ ಸಮಿತಿಯ ದಕ್ಷಿಣ ಪ್ರಾಂತ ಸಹ ಬೌದ್ಧಿಕ ಪ್ರಮುಖೆ ಮೀನಾಕ್ಷಿ ಅಕ್ಕ ಮುಖ್ಯ ವಕ್ತಾರರಾಗಿ ಪಾಲ್ಗೊಳ್ಳುವರು. ಸಂಜೆ 4ಗಂಟೆವರೆಗೆ ಗೋಷ್ಠಿ, ಸಂವಾದ, ಚರ್ಚೆಗಳು ನಡೆಯಲಿವೆ. ನಾರೀ ಶಕ್ತಿ ಸಂಗಮ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಡಿ. 1ರಂದು ಸಂಜೆ 5ಗಂಟೆಗೆ ನಗರದಲ್ಲಿ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಪ್ರದರ್ಶಿನಿಯಲ್ಲಿ ಸ್ವಾತಂತ್ರ್ಯ ಪೂರ್ವ ಹೋರಾಟ ಮಾಡಿದ ವೀರ ಮಹಿಳೆಯರು ಹಾಗೂ ಸ್ವಾತಂತ್ರ್ಯಾನಂತರ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರ ಚಿತ್ರ ಪ್ರದರ್ಶಿಸಲಾಗುವುದು. ಗೋಷ್ಠಿಯಲ್ಲಿ ಭಾರತೀಯ ಚಿಂತನೆಯಲ್ಲಿ ಮಹಿಳೆ, ಭಾರತದ ವಿಕಾಸದಲ್ಲಿ ಮಹಿಳೆ ಪಾತ್ರ ಮತ್ತು ಮಹಿಳಾ ಸುರಕ್ಷತೆ, ಸ್ವಾವಲಂಬನೆ, ಆರೋಗ್ಯ , ಶಿಕ್ಷಣ ವಿಷಯಗಳ ಬಗ್ಗೆ ವಿಷಯ ತಜ್ಞರು ಮಾತನಾಡುವರು ಎಂದರು. ಮಹಿಳಾ ಸಮನ್ವಯದ ಪ್ರಮುಖರಾದ ಸುಧಾ ಜಯರುದ್ರೇಶ್, ಶೋಭಾ ಕೊಟ್ರೇಶ್, ಜಯಲಕ್ಷ್ಮಿ ಶಶಿಕುಮಾರ್, ಬಿ.ಎಸ್ ಉಮಾಪತಿ ಪತ್ರಿಕಾಗೋಷ್ಠಿಯಲ್ಲಿದ್ದರು.

# 2.23 ಲಕ್ಷ ಕೋಟಿ ರೂ.ಗಳ ರಕ್ಷಣಾ ಖರೀದಿಗೆ ಒಪ್ಪಿಗೆ

ನವದೆಹಲಿ, ನ. 30 – 2.23 ಲಕ್ಷ ಕೋಟಿ ರೂ.ಗಳ ರಕ್ಷಣಾ ಖರೀದಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇದರಲ್ಲಿ 97 ತೇಜಸ್ ಸಮರ ವಿಮಾನ ಹಾಗೂ 156 ಪ್ರಚಂಡ ಸಮರ ಹೆಲಿಕಾಪ್ಟರ್‌ಗಳ ಖರೀದಿ ಸಹ ಸೇರಿದೆ. ಇದರಿಂದಾಗಿ ರಕ್ಷಣಾ ಪಡೆಗಳ ಸಾಮರ್ಥ್ಯ ಗಣನೀಯವಾಗಿ ಹೆಚ್ಚಾಗಲಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಖರೀದಿ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 2.23 ಲಕ್ಷ ಕೋಟಿ ರೂ.ಗಳ ಖರೀದಿ ಪೈಕಿ, ಶೇ.98ರಷ್ಟು ದೇಶೀಯ ಉದ್ಯಮಗಳಿಂದ ಬರಲಿದೆ. ಇದರಿಂದ ದೇಶದ ರಕ್ಷಣಾ ವಲಯದ ಸ್ವಾವಲಂಬನೆಗೆ ಉತ್ತೇಜನ ಸಿಗಲಿದೆ.

ಎಸ್‌ಯು - 30 ಸಮರ ವಿಮಾನಗಳನ್ನು ಉನ್ನತೀಕರಿಸುವ ಯೋಜನೆಗೂ ಒಪ್ಪಿಗೆ ನೀಡಲಾಗಿದೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಈ ಪ್ರಕ್ರಿಯೆ ಕೈಗೊಳ್ಳಲಿದೆ.

# ನಗರದಲ್ಲಿ ಇಂದು ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ 60ರ ವರ್ಷಾಚರಣೆ

ದಾವಣಗೆರೆ, ನ.30- ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಹಾಗೂ ಶ್ರೀ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಪ್ರೌಢಶಾಲೆಗಳ 60ರ ಸಂಭ್ರಮ ಕಾರ್ಯಕ್ರಮವನ್ನು ನಾಳೆ ದಿನಾಂಕ 1 ರಿಂದ ಮೂರು ದಿನಗಳ ಕಾಲ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯ ಆವರಣದ ಶ್ರೀಮತಿ ಸುರೇಖ ವೀರಣ್ಣ ಚಿಗಟೇರಿ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಿನಾಂಕ 1ರಂದು ಬೆಳಿಗ್ಗೆ 9 ಗಂಟೆಗೆ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಿಂದ ಜಾಥಾ ಆರಂಭವಾಗಲಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಚಾಲನೆ ನೀಡುವರು. ಜಯವಿಭವ ಚಿಗಟೇರಿ ಅಧ್ಯಕ್ಷತೆ ವಹಿಸುವರು. ಸ್ತಬ್ಧ ಚಿತ್ರಕ್ಕೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ. ಕೊಟ್ರೇಶ್ ಚಾಲನೆ ನೀಡುವರು.

ಡಿ. 1ರಂದು ಸಂಜೆ 5 ಗಂಟೆಗೆ 60ರ ಸಂಭ್ರಮ ಕಾರ್ಯಕ್ರಮವನ್ನು ದಾವಣಗೆರೆ ವಿವಿ ಕುಲಪತಿ ಬಿ. ಡಿ. ಕುಂಬಾರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ, ಊಟಿಯ ಗುಡ್ ಶೆಫರ್ಡ್ ಸ್ಕೂಲ್ ಅಧ್ಯಕ್ಷ ಜೇಕಬ್ ಥಾಮಸ್, ಪಾಲಿಕೆ ಸದಸ್ಯ ಎ. ನಾಗರಾಜ್, ವರ್ತಕ ಅರುಣಾಚಲ ರೇವಣಕರ್ ಭಾಗವಹಿಸುವರು. ವೀರಣ್ಣ ವಿ. ಚಿಗಟೇರಿ ಅಧ್ಯಕ್ಷತೆ ವಹಿಸುವರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಡಿ. 2ರಂದು ಬೆಳಿಗ್ಗೆ 10ಗಂಟೆಗೆ ಸಂಸ್ಥಾಪಕರ ದಿನ ಹಾಗೂ 'ಧರ್ಮಪ್ರಕಾಶದೊಂದು ಕಿರಣ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಸುವರ್ಣ ನಾಗೇಶ್ ಕವಿ ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗಡೆ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹೆಚ್.ಬಿ. ಮಂಜುನಾಥ್ ಉಪಸ್ಥಿತರಿರಲಿದ್ದಾರೆ.

ಸಂಜೆ 5 ಗಂಟೆಗೆ 'ಭವಿಷ್ಯತ್ತಿನಲ್ಲಿ ವಿದ್ಯಾಸಂಸ್ಥೆ' ಕುರಿತ ಚರ್ಚೆಯಲ್ಲಿ ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ್, ವೈದ್ಯೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಜೇಕಬ್ ಥಾಮಸ್, ಪಾಲಿಕೆ ಮಹಾಪೌರ ವಿನಾಯಕ ಪೈಲ್ವಾನ್ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಡಿ. 3ರಂದು ಬೆಳಿಗ್ಗೆ 10.30ಕ್ಕೆ ನಡೆಯುವ 'ಇಂದಿನ ಶಿಕ್ಷಣ ವ್ಯವಸ್ಥೆ-ಮೌಲ್ಯ ಪ್ರತಿಪಾದನೆ' ಕುರಿತು ಡಾ. ಹೆಚ್.ವಿ. ವಾಮದೇವಪ್ಪ ವಿಷಯ ಮಂಡನೆ ಮಾಡುವರು. ಬಸವರಾಜಪ್ಪ ಬೆಳಗಾವಿ ಅಧ್ಯಕ್ಷತೆ ವಹಿಸುವರು. ಮಹಿಮಾ ಪಟೇಲ್, ಡಾ. ಹೆಚ್.ಬಿ. ಶಿವಕುಮಾರ್, ಬಿ.ಎನ್. ಮಲ್ಲೇಶ್, ಟಿ.ಎಂ. ಉಮಾಪತಯ್ಯ, ಕೆ.ವಿ. ಸುಜಾತ ಭಾಗವಹಿಸುವರು. ಸಂಜೆ 5ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಿದ್ಯಾಸಂಸ್ಥೆ ಅಧ್ಯಕ್ಷ ಮುರುಗೇಂದ್ರ ಚಿಗಟೇರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಹೆಚ್.ಎಸ್. ಶಿವಶಂಕರ್, ಅಜಯ್‌ಕುಮಾರ್, ಮೀನಾಕ್ಷಿ ಹಾಗೂ ಶ್ರೀನಿವಾಸ ದಾಸಕರಿಯಪ್ಪ ಪಾಲ್ಗೊಳ್ಳುವರು. ಬಳಿಕ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷ ಮುರುಘೇಂದ್ರ ವಿ. ಚಿಗಟೇರಿ, ಸಹಕಾರ್ಯದರ್ಶಿ ಶ್ರೀಮತಿ ಸೌಮ್ಯ ಬಸವರಾಜ್, ಶೈಕ್ಷಣಿಕ ಸಲಹೆಗಾರ ಎಂ.ಟಿ. ಮಳಗಿ, ಮುಖ್ಯೋಪಾಧ್ಯಾಯರಾದ ಹೆಚ್. ನಿಂಗಪ್ಪ ಪತ್ರಿಕಾಗೋಷ್ಠಿಯಲ್ಲಿದ್ದರು.

# ಕೀರ್ತನೆಗಳ ಮೂಲಕ ಮೌಢ್ಯ, ಜಾತಿ ಹೋಗಲಾಡಿಸಲು ಪ್ರಯತ್ನಿಸಿದ್ದ ಕನಕದಾಸರು

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ನ.30- ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಮೌಢ್ಯ, ಜಾತಿ ಹೋಗಲಾಡಿಸಲು ಪ್ರಯತ್ನಿಸಿದ್ದರು ಎಂದು ಶಾಸಕರಾದ ಶ್ರೀಮತಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿಯ ಸಾಮರ್ಥ್ಯ ಸೌಧದಲ್ಲಿ ತಾಲ್ಲೂಕು ಆಡಳಿತದಿಂದ ಆಯೋಜಿಸಿದ್ದ ಕನಕದಾಸರ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕನಕದಾಸರ ಪದಗಳನ್ನು ಅರ್ಥ ಮಾಡಿಕೊಂಡು, ಜಾತೀಯತೆ ಬಿಟ್ಟು ಮಾನವತಾ ಗುಣ ಬೆಳೆಸಿಕೊಳ್ಳಬೇಕು ಎಂದರು.

ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಮಾತನಾಡಿ, ದಾಸ ಸಾಹಿತ್ಯ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಸಹಕಾರಿ ಎಂದ ಅವರು, ಕನಕದಾಸರ ಕೀರ್ತನೆಗಳು ಇಂದಿಗೂ ಪ್ರಸ್ತುತ ಎಂದು ನುಡಿದರು.

ಉಪನ್ಯಾಸ ನೀಡಿದ ವಿಶ್ರಾಂತ ಪ್ರಾಧ್ಯಾಪಕ ಡಾ.ಮಲ್ಲಿಕಾರ್ಜುನ ಕಲಮರಹಳ್ಳಿಯವರು ಕನ್ನಡ ಸಾಹಿತ್ಯ ಲೋಕದಲ್ಲಿ ಚತುರ್ಮುಖ ವ್ಯಕ್ತಿತ್ವ ಹೊಂದಿದ್ದ ಏಕೈಕ ವ್ಯಕ್ತಿ ಕನಕದಾಸರು ಎಂದು ಹೇಳಿದರು. ಪ್ರತಿಯೊಬ್ಬರೂ, ಪ್ರತಿಯೊಬ್ಬರಿಗೂ ಬಾಗಿಲನ್ನು ತೆರೆದುಕೊಂಡು ಮಾನವತೆಯ ತೋರಣ ಕಟ್ಟಬೇಕು. ಇದರಿಂದ ಮಹಾನ್ ವ್ಯಕ್ತಿಗಳ ಜಯಂತಿ ಆಚರಣೆ ಸಾರ್ಥಕವಾಗುತ್ತದೆ. ದಾರ್ಶನಿಕರು ಸಮಾಜದ ಸ್ವತ್ತು, ಅವರ ಆದರ್ಶಗಳನ್ನು ಪಾಲಿಸೋಣ ಎಂದರು.

ತಹಶೀಲ್ದಾರ್ ಬಿ.ವಿ.ಗಿರೀಶ್‌ಬಾಬು, ತಾ.ಪಂ ಇಒ ಕೆ.ಆರ್.ಪ್ರಕಾಶ್, ಬಿಇಒ ಬಸವರಾಜಪ್ಪ, ಪುರಸಭಾ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಪುರಸಭಾ ಸದಸ್ಯರುಗಳಾದ ಎಂ.ವಿ.ಅಂಜಿನಪ್ಪ, ಲಾಟಿ ದಾದಾಪೀರ್, ಉದ್ದಾರ ಗಣೇಶ್, ಮಂಜುನಾಥ ಇಜಂತಕರ್, ಕುರುಬ ಸಮಾಜದ ಅಧ್ಯಕ್ಷ ಗೋಣೆಬಸಪ್ಪ, ಮುಖಂಡರಾದ ಎಚ್.ಬಿ.ಪರಶುರಾಮಪ್ಪ, ಎಚ್.ವಸಂತಪ್ಪ, ಕಲ್ಲೇರ ಬಸವರಾಜಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಚಿಕ್ಕೇರಿ ಬಸಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ರೇಣುಕಾದೇವಿ, ಇಸಿಒ ಗಿರಜ್ಜಿ ಮಂಜುನಾಥ, ಎಇಇ ನಾಗಪ್ಪ ಇತರರು ಹಾಜರಿದ್ದರು.

# ಏಡ್ಸ್ ಪೀಡಿತ ಮಕ್ಕಳ ಭವಿಷ್ಯಕ್ಕೆ ಭರವಸೆ...

ಏಡ್ಸ್ ಪೀಡಿತ ಮಕ್ಕಳ ಭವಿಷ್ಯವು ನಮ್ಮ ಗಮನ ಮತ್ತು ಸಹಾನುಭೂತಿಯನ್ನು ಬೇಡುವ ವಿಷಯ ವಾಗಿದೆ. ವೈದ್ಯಕೀಯ ಪ್ರಗತಿಗಳು ಎಚ್‌ಐವಿ/ಏಡ್ಸ್ ನೊಂದಿಗೆ ಜೀವಿಸುವ ಅನೇಕರ ಜೀವಿತಾವಧಿಯನ್ನು ಹೆಚ್ಚಿಸಿರುವುದ ರಿಂದ, ಮುಂದಿನ ಪೀಳಿಗೆಯ ಮೇಲೆ ಪರಿಣಾಮವು ಗಮ ನಾರ್ಹ ಕಾಳಜಿಯಾಗಿ ಉಳಿದಿದೆ. ಈ ಮಕ್ಕಳು ಎದುರಿಸುತ್ತಿ ರುವ ಸವಾಲುಗಳನ್ನು ಪರಿಶೀಲಿಸಿ ಅವರ ಬೆಂಬಲ ಮತ್ತು ಸಬಲೀಕರಣಕ್ಕಾಗಿ ಕೆಲವು ಸಂಭಾವ್ಯ ಮಾರ್ಗಗಳನ್ನು ಸಂಗ್ರಹಿಸಲಾಗಿದೆ.

* **ಆರೋಗ್ಯ ಮತ್ತು ಯೋಗಕ್ಷೇಮ:** HIV/AIDS ಹೊಂದಿರುವ ಪೋಷಕರಿಗೆ ಜನಿಸಿದ ಮಕ್ಕಳು ಹುಟ್ಟಿನಿಂದಲೇ ಆರೋಗ್ಯ ಸವಾಲುಗಳನ್ನು ಎದುರಿಸಬಹುದು. ಸರಿಯಾದ ಆರೋಗ್ಯ ರಕ್ಷಣೆ, ಆಂಟಿರೆಟ್ರೋವೈರಲ್ ಚಿಕಿತ್ಸೆಗಳು ಮತ್ತು ಪೌಷ್ಟಿಕಾಂಶದ ಬೆಂಬಲವು ಅವರ ಯೋಗಕ್ಷೇಮವನ್ನು ಖಚಿತಪಡಿಸಿಕೊಳ್ಳುವಲ್ಲಿ ನಿರ್ಣಾಯಕ ಅಂಶಗಳಾಗಿವೆ. ನಡೆಯುತ್ತಿರುವ ಸಂಶೋಧನೆ ಮತ್ತು ವೈದ್ಯಕೀಯ ಪ್ರಗತಿಗಳು ಈ ಮಕ್ಕಳ ಜೀವನದ ಗುಣಮಟ್ಟವನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

* **ಕಳಂಕ ಮತ್ತು ತಾರತಮ್ಯ:** ನಿರಂತರ ಸವಾಲುಗಳಲ್ಲಿ ಒಂದು HIV/AIDS ಗೆ ಅಂಟಿಕೊಂಡಿರುವ ಕಳಂಕ. ವೈರಸ್ ಪೀಡಿತ ಮಕ್ಕಳು ತಮ್ಮ ಸಮುದಾಯಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯವನ್ನು ಎದುರಿಸಬಹುದು. ಕಳಂಕದ ಋಣಾತ್ಮಕ ಪರಿಣಾಮವನ್ನು ತಗ್ಗಿಸಲು ಸಮಾಜದ ತಪ್ಪುಗ್ರಹಿಕೆಗಳನ್ನು ಪರಿಹರಿಸುವುದು ಮತ್ತು ಅಂತರ್ಗತ ಪರಿಸರವನ್ನು ಬೆಳೆಸುವುದು ಅತ್ಯಗತ್ಯ.

* **ಶಿಕ್ಷಣ ಮತ್ತು ಸಬಲೀಕರಣ:** ಶಿಕ್ಷಣದ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು ಈ ಮಕ್ಕಳಿಗೆ ಧನಾತ್ಮಕ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಅಂಶವಾಗಿದೆ. ಸ್ಕಾಲರ್‌ಶಿಪ್‌ಗಳು, ಮಾರ್ಗದರ್ಶನ ಕಾರ್ಯಕ್ರಮಗಳು ಮತ್ತು ಜಾಗೃತಿ ಅಭಿಯಾನಗಳು ಅಡೆತಡೆಗಳನ್ನು ಒಡೆಯಲು ಮತ್ತು ಅವರ ಕನಸುಗಳನ್ನು ಮುಂದುವರೆಸಲು ಅವರನ್ನು ಸಶಕ್ತಗೊಳಿಸಲು ಕೊಡುಗೆ ನೀಡುತ್ತವೆ. ಶಿಕ್ಷಣವು ಅವರನ್ನು ಜ್ಞಾನದಿಂದ ಸಜ್ಜುಗೊಳಿಸುವುದು ಮಾತ್ರವಲ್ಲದೆ ಅವರು ಎದುರಿಸಬಹು ದಾದ ಸವಾಲುಗಳ ವಿರುದ್ಧ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುತ್ತದೆ.

* **ಮನೋಸಾಮಾಜಿಕ ಬೆಂಬಲ:** ಏಡ್ಸ್ ಪೀಡಿತ ಮಕ್ಕಳು ಸಾಮಾನ್ಯವಾಗಿ ಭಾವನಾತ್ಮಕ ಮತ್ತು ಮಾನಸಿಕ ಒತ್ತಡವನ್ನು ಅನುಭವಿಸುತ್ತಾರೆ. ಸಮಾಲೋಚನೆ ಸೇವೆಗಳು ಮತ್ತು ಸಮು ದಾಯ ಗುಂಪುಗಳನ್ನು ಒಳಗೊಂಡಂತೆ ಬೆಂಬಲ ನೆಟ್ ವರ್ಕ್ ಗಳನ್ನು ಸ್ಥಾಪಿಸುವುದು ಅವರ ಮಾನಸಿಕ ಯೋಗ ಕ್ಷೇಮಕ್ಕೆ ನಿರ್ಣಾಯಕ ಅಡಿಪಾಯವನ್ನು ಒದಗಿಸುತ್ತದೆ. ಅವರ ಭಾವನಾತ್ಮಕ ಸ್ಥಿತಿಸ್ಥಾಪಕತ್ವವನ್ನು ಪೋಷಿಸುವಲ್ಲಿ ಸಮಗ್ರ ಬೆಂಬಲದ ಪ್ರಾಮುಖ್ಯತೆಯನ್ನು ಗುರುತಿಸುವುದು ಅತ್ಯಗತ್ಯ.

* **ಅನಾಥ ಪ್ರಜ್ಞೆ ಮತ್ತು ದುರ್ಬಲತೆ:** ಏಡ್ಸ್‌ನಿಂದ ಪ್ರಭಾವಿತವಾಗಿರುವ ಗಮನಾರ್ಹ ಸಂಖ್ಯೆಯ ಮಕ್ಕಳು ತಮ್ಮನ್ನು ಅನಾಥರನ್ನಾಗಿ ಅಥವಾ ದುರ್ಬಲ ಕುಟುಂಬ ಪರಿಸ್ಥಿತಿಗಳಲ್ಲಿ ಕಾಣಬಹುದು. ಸಾಮಾಜಿಕ ಸುರಕ್ಷತಾ ಜಾಲ ಗಳನ್ನು ಬಲ ಪಡಿಸುವುದು, ಪರಿಣಾಮಕಾರಿ ದತ್ತು ಪ್ರಕ್ರಿಯೆ ಗಳನ್ನು ಅನು ಷ್ಠಾನಗೊಳಿಸುವುದು ಮತ್ತು ಸಮುದಾಯ-ಆಧಾರಿತ ಆರೈಕೆ ಯನ್ನು ಉತ್ತೇಜಿಸುವುದು ಈ ಮಕ್ಕಳಿಗೆ ಸ್ಥಿರವಾದ ವಾತಾವರಣ ವನ್ನು ಒದಗಿಸಲು ಅತ್ಯಗತ್ಯ ಕಾರ್ಯ ತಂತ್ರಗಳಾಗಿವೆ.

ಏಡ್ಸ್‌ನಿಂದ ಪೀಡಿತ ಮಕ್ಕಳ ಭವಿಷ್ಯವು ಸರ್ಕಾರಗಳು, ಸಮುದಾಯಗಳು ಮತ್ತು ಸಂಸ್ಥೆಗಳ ಸಾಮೂಹಿಕ ಪ್ರಯತ್ನಗಳ ಮೇಲೆ ಅವಲಂಬಿತ ವಾಗಿದೆ. ಆರೋಗ್ಯದ ಅಸಮಾನತೆಗಳನ್ನು ಪರಿಹರಿಸುವ ಮೂಲಕ, ಕಳಂಕವನ್ನು ಎದುರಿಸುವ ಮೂಲಕ, ಶಿಕ್ಷಣವನ್ನು ಬೆಳೆಸುವ ಮೂಲಕ, ಮಾನಸಿಕ ಸಾಮಾಜಿಕ ಬೆಂಬಲ ವನ್ನು ಒದಗಿಸುವ ಮತ್ತು ಸ್ಥಿರವಾದ ಜೀವನ ಪರಿಸ್ಥಿತಿಗಳನ್ನು ಖಾತ್ರಿಪಡಿಸುವ ಮೂಲಕ, ನಾವು ಈ ಚೇತರಿಸಿಕೊಳ್ಳುವ ಯುವ ವ್ಯಕ್ತಿಗಳಿಗೆ ಉಜ್ವಲ ಮತ್ತು ಹೆಚ್ಚು ಭರವಸೆಯ ಭವಿಷ್ಯವನ್ನು ನೀಡಬಹುದು. ನಾವು ಮುಂದಿನ ಹಾದಿಯನ್ನು ನ್ಯಾವಿಗೇಟ್ ಮಾಡುವಾಗ, ಅವರ ಸಾಮರ್ಥ್ಯ ವನ್ನು ಗುರುತಿಸುವುದು ಮತ್ತು ಅವರ ಯೋಗಕ್ಷೇಮ ಮತ್ತು ಯಶಸ್ಸಿನ ಹಾದಿಯಲ್ಲಿ ನಿಂತಿರುವ ಅಡೆತಡೆಗಳನ್ನು ಒಡೆಯಲು ಸಹಕಾರದಿಂದ ಕೆಲಸ ಮಾಡುವುದು ಕಡ್ಡಾಯವಾಗಿದೆ.



## ಏಡ್ಸ್ ಪೀಡಿತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆ...

**ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಏಡ್ಸ್ ಸೋಂಕಿತ ಮತ್ತು ಬಾಧಿತ ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯನ್ನು 2010ನೇ ಸಾಲಿನಿಂದ ಜಾರಿಗೊಳಿಸಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯ ಮೂಲಕ ಅನುಷ್ಠಾನಗೊಳಿಸುತ್ತಿದೆ. ಕುಟುಂಬದ 18 ವರ್ಷದೊಳಗಿನ ಸೋಂಕಿತ ಮತ್ತು ಬಾಧಿತ ಮಕ್ಕಳು ಆರ್ಥಿಕ ಸಹಾಯ ಪಡೆಯಲು ಅರ್ಹರಾಗಿರು ತ್ತಾರೆ.**

**ಅವರಿಗೆ ಪೌಷ್ಟಿಕ ಆಹಾರ ಪಡೆ ಯಲು, ಶಿಕ್ಷಣದ ಮುಖ್ಯವಾಹಿನಿಗೆ ತರಲು, ಆರೋಗ್ಯ ಸೇವೆಗಳನ್ನು ಪಡೆಯಲು ಅನುವಾಗುವಂತೆ ಈ ಆರ್ಥಿಕ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಈ ಸೌಲಭ್ಯ ಗಳನ್ನು ಫಲಾನುಭವಿಗಳು ಪಡೆಯಲು ಹಲವು ಇಲಾಖೆಗಳು ಸಹಕರಿಸುತ್ತಿವೆ. ಆರೋಗ್ಯ ಇಲಾಖೆ, ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಕರ್ನಾಟಕ ಆರೋಗ್ಯ ಸಂವರ್ಧನ ಟ್ರಸ್ಟ್, ಶಿಕ್ಷಣ ಇಲಾಖೆ, ಪರಿಶಿಷ್ಟ ಜಾತಿ ಹಾಗೂ ವರ್ಗಗಳ ಇಲಾಖೆ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ, ಈ ಎಲ್ಲಾ ಇಲಾಖೆಗಳ ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದ ಅಧಿಕಾರಿಗಳು ಮಕ್ಕಳಿಗಾಗಿ ವಿಶೇಷ ಪಾಲನಾ ಯೋಜನೆಯ ಅನುಷ್ಠಾನದಲ್ಲಿ ನೆರವಾಗುತ್ತಿದ್ದಾರೆ.**

**ವಿಬಿಪಿ ಫೌಂಡೇಶನ್**
**+918050299920**



## ಸೋಂಕಿತ ಮಕ್ಕಳ ಸೇವೆಯಲ್ಲಿ ಶಿವಕುಮಾರ್ ಮೇಗಳಮನೆ

***ತಮ್ಮದಲ್ಲದ ತಪ್ಪಿಗೆ ಸೋಂಕಿತರಾಗುವ ಮಕ್ಕಳನ್ನು ಪೋಷಿಸುವ ಕೆಲಸದಲ್ಲಿ ದಾವಣಗೆರೆಯ ಶಿವಕುಮಾರ್ ಮೇಗಳಮನೆ ತನ್ನ ಗೆಳೆಯರ ತಂಡದೊಂದಿಗೆ ಸೇವೆಯಲ್ಲಿ ತೊಡಗಿದ್ದಾರೆ. ಮೂಲತಃ ಹರಿಹರ ತಾಲ್ಲೂಕು ಬೆಳ್ಳೂಡಿಯ ಈ ಯುವಕ 2019ರಲ್ಲಿ ವಿಬಿಪಿ ಫೌಂಡೇಶನ್ ಅಡಿಯಲ್ಲಿ ಪ್ರೇರಣಾ ಮಕ್ಕಳ ಆರೈಕೆ ಕೇಂದ್ರವನ್ನು ಆರಂಭಿಸಿದ್ದಾರೆ. ಈ ಮಕ್ಕಳಿಗೆ ಪೌಷ್ಟಿಕ ಆಹಾರದ ಜೊತೆಗೆ ಸರಿಯಾದ ಆರೈಕೆ ಮಾಡುತ್ತಿರುವ ಈ ಕೇಂದ್ರ, ಸೂಕ್ತ ಶಿಕ್ಷಣವನ್ನು ಕೊಡಿಸುವಲ್ಲಿ ಮುಂದಾಗಿದ್ದಾರೆ. ನಿಜಾರ್ಥದಲ್ಲಿ ಸಮಾಜ ಸೇವೆಯನ್ನು ಮಾಡುತ್ತಿರುವ ಈ ಯುವಕರಿಗೆ ಸಮಾಜಮುಖಿ ಸಂಘಟನೆಗಳು, ದಾನಿಗಳು ಮತ್ತು ಮುಖ್ಯವಾಗಿ ಜನಪ್ರತಿನಿಧಿಗಳು ಹಾಗೂ ಸರ್ಕಾರ ಉತ್ತಮ ಸಹಕಾರ ನೀಡುವುದರ ಜೊತೆಗೆ ಧನಾತ್ಮಕವಾಗಿ ಪ್ರೋತ್ಸಾಹಿಸಬೇಕಾಗಿದೆ.***



# ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಗೀಗ 60ರ ಸಂಭ್ರಮ



**ಇಂದಿನಿಂದ 3 ದಿನಗಳ ಅಕ್ಕಮಹಾದೇವಿ ಶಾಲೆ ಮತ್ತು ಮುರುಘ ರಾಜೇಂದ್ರ, ಶಾಲೆಗಳ 60ನೇ ವರ್ಷದ ಸಂಭ್ರಮಾಚರಣೆ**





ಪ್ರಸ್ತುತ ಸಮಾಜದಲ್ಲಿ ವ್ಯಕ್ತಿ ಗುಣಮಟ್ಟದ ಜೀವನ ನಡೆಸಲು ಶಿಕ್ಷಣ ಅತ್ಯಂತ ಮುಖ್ಯ ಸಾಧನ ಎನ್ನಬಹುದು. ಶಿಕ್ಷಣವು ವ್ಯಕ್ತಿಗೆ ಮಾರ್ಗದರ್ಶನವನ್ನು, ತರಬೇತಿಯನ್ನು, ನಿರ್ದೇಶನವನ್ನು ನೀಡುವ ಸಂಜೀವಿನಿ ಎನ್ನಬಹುದು.

ಶಿಕ್ಷಣವು ವ್ಯಕ್ತಿಗೆ ದಾರಿದೀಪವಾಗಿ ಮಾನವನ ತೃತೀಯ ಕಣ್ಣು ಅಥವಾ ಜ್ಞಾನದ ಚಕ್ಷು ಎಂದು ಕರೆಯಲ್ಪಟ್ಟಿದೆ.

ಅಂತೆಯೇ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಈ ಮಾತನ್ನು ಅಕ್ಷರಶಃ ನಿಜ ಮಾಡಿದವರು ದಾವಣಗೆರೆಯ ಕೊಡುಗೈ ದಾನಿಗಳಾದ ಧರ್ಮಪ್ರಕಾಶ ಶ್ರೀ ಚಿಗಟೇರಿ ಮುರಿಗೆಪ್ಪನವರ ಜೇಷ್ಠ ಪುತ್ರರಾದ ಶರಣ ಶ್ರೀ ವೀರಭದ್ರಪ್ಪ ಎಂ. ಚಿಗಟೇರಿಯವರು 1962ರಲ್ಲಿ ಜಯದೇವ ಶ್ರೀಗಳ ಆಶೀರ್ವಾದದಿಂದ ಶಿವಯೋಗಾಶ್ರಮದಲ್ಲಿ ಕೇವಲ 7 ವಿದ್ಯಾರ್ಥಿಗಳಿಂದ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಪ್ರಾರಂಭಿಸಿದರು. ಜೊತೆಗೆ ಬಾಲಕರಿಗೆ ಶ್ರೀ ಜಗದ್ಗುರು ಜಯ ವಿಭವ ಮುರುಘರಾಜೇಂದ್ರ ಪ್ರೌಢಶಾಲೆ ಮಾಡಿದರು. ಇದಕ್ಕೆ ಸ್ವತಃ ಜಯದೇವ ಶ್ರೀಗಳೇ ಪ್ರೇರಣೆ ಮತ್ತು ಸ್ಫೂರ್ತಿಯಾಗಿದ್ದು ಒಂದು ವಿಶೇಷ.

ಅಂದು ಚಿಗಟೇರಿ ಮನೆತನದಿಂದ ನಿತ್ಯಜ್ಯೋತಿ ಬೆಳಗಿಸಲು ಶಿವಯೋಗಾಶ್ರಮಕ್ಕೆ ಎಣ್ಣೆಯನ್ನು ಕೊಡುತ್ತಿದ್ದ ಕಾಲ. ಒಂದು ದಿನ ಶ್ರೀಯುತರಿಗೆ ಜಯದೇವ ಶ್ರೀಗಳು ಇಲ್ಲಿ ಜ್ಯೋತಿ ಬೆಳಗಿಸಿದ ಹಾಗೇ ಅಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಜ್ಯೋತಿಯನ್ನು ಏಕೆ ಬೆಳಗಿಸಬಾರದು? ಎಂದರು. ಆ ಮಾತನ್ನು ಶಿರಸಾವಹಿಸಿ ದೈವದ ಪ್ರೇರಣೆಯಂತೆ ಶ್ರೀಯುತರು ಮಹಾಶಿವಶರಣೆ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯನ್ನು ಪ್ರಾರಂಭಿಸಿ, ತದನಂತರ ಸ್ವಂತ ಕಟ್ಟಡದಲ್ಲಿ ಎನ್.ಆರ್. ರಸ್ತೆಯಲ್ಲಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಎಂಬ ನಾಮಫಲಕದೊಂದಿಗೆ ಚಿರ ಸ್ಥಾಯಿಯಾಗಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ.

ಅಂದಿನ ಕಾಲಕ್ಕೆ ಹಳೇ ದಾವಣಗೆರೆಯಲ್ಲಿ ಹೆಣ್ಣು ಮಕ್ಕಳಿಗೆಂದು ಪ್ರತ್ಯೇಕ ಶಾಲೆ ವ್ಯವಸ್ಥೆ ಇರದ ಕಾರಣ ಶಾಲೆ ಪ್ರಾರಂಭಿಸಿದ್ದು ನಿಜಕ್ಕೂ ಚಿಗಟೇರಿ ಮನೆತನದ ಕೀರ್ತಿ ಅಜರಾಮರವಾಯಿತು.

ಸಂಸ್ಥಾಪಕ ಅಧ್ಯಕ್ಷರಾದ ವೀರಭದ್ರಪ್ಪನವರು,ಎಂ. ಚಿಗಟೇರಿಯವರು ಅಂದು ನೆಟ್ಟ ಜ್ಞಾನದ ಸಸಿ ಇಂದಿಗೆ 60 ರ ಸಂವತ್ಸರಗಳನ್ನು ಪೂರೈಸಿದ್ದು ಮಹಾನ್ ಸಾಧನೆಗಾಗಿ ದಾಖಲೆಯಾಗಿದೆ.

ಜ್ಞಾನದ ಸಸಿಯಲ್ಲಿ ಕೇವಲ 7 ಎಲೆಗಳಿಂದ ಕಂಗೊಳಿಸಿ ಇಂದು 1500 ಎಲೆಗಳಷ್ಟು ಬೆಳೆದು ಬೋಧಿ ವೃಕ್ಷದ (ಜ್ಞಾನದ ವೃಕ್ಷ) ಸಾಲಿಗೆ ಸೇರ್ಪಡೆಯಾಗಿರುವುದು ಒಂದು ಮಹಾನ್ ಯಶಸ್ಸಿಗೆ ನೈಜ ಸಾಕ್ಷಿಯಾಗಿದೆ.

ಸಂಸ್ಥಾಪಕರು ಅಂದು ಕಟ್ಟಡ ಬುನಾದಿಗೆ ಸೇವಾ ನಿಷ್ಠೆ, ಪ್ರಾಮಾಣಿಕತೆ ಮತ್ತು ದೈವಭಕ್ತಿ ಎಂಬ 3 ಸಂಸ್ಕಾರದ ಬೀಜಗಳನ್ನು ಹಾಕಿ, ನೀರುಣಿಸಿ ಬೆಳೆಸಿದ ಮಹಾನ್ ವೃಕ್ಷವು ತನ್ನ ಪ್ರತಿಫಲವನ್ನು ಶಾಲೆಯ ವಿದ್ಯಾರ್ಥಿಗಳ ಮುಖೇನ ಸಮಾಜಕ್ಕೆ ಕೊಡುಗೆ ನೀಡುತ್ತಾ ಬಂದಿರುವುದು ವಿಶೇಷವಾಗಿದೆ.

ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಅಡಿಯಲ್ಲಿ ಒಟ್ಟು 8 ಶಾಲೆಗಳಾಗಿ ಅತ್ಯಂತ ಮೌಲ್ಯಯುತ ಶಿಕ್ಷಣವನ್ನು ನೀಡುತ್ತಾ ರಾಜ್ಯ ಮತ್ತು ರಾಷ್ಟ್ರಕ್ಕೆ ಸಾಮಾನ್ಯ ವಿದ್ಯಾರ್ಥಿಗಳನ್ನು ಬಹುಮುಖ ಪ್ರತಿಭಾಶಾಲಿಗಳನ್ನಾಗಿ ಮಾಡುವಲ್ಲಿ ಈ ಸಂಸ್ಥೆ ಪಟ್ಟ ಶ್ರಮ ನಿಜಕ್ಕೂ ಶ್ಲಾಘನೀಯ. ನೂರಾರು ಕುಟುಂಬಗಳು ಬೋಧಕ ಮತ್ತು ಬೋಧಕೇತರ ವರ್ಗವು ಇಂದು ಸಂತೃಪ್ತಿ ಪಡೆದುಕೊಂಡಿದೆ. ಅನ್ನದಾತೋ ಸುಖೀಭವ ಎಂಬಂತಿದೆ.

ಇನ್ನೂ ಶಾಲಾ ಶಿಕ್ಷಕಿಯರ ನೇಮಕಾತಿ ಮತ್ತು ಸಂದರ್ಶನದ ವೇಳೆ ಶಿಕ್ಷಕರಿಗೆ ಪಾರದರ್ಶಕತೆ, ಪ್ರಾಮಾಣಿಕತೆ ಮತ್ತು ಜಾತ್ಯತೀತತೆಯಿಂದ ಕೂಡಿರುವುದು ವಿಶೇಷವಾಗಿದೆ. ಅಭ್ಯರ್ಥಿಗಳ ಶೈಕ್ಷಣಿಕ ಗುಣಮಟ್ಟ, ವಿದ್ಯಾರ್ಹತೆ, ನಡೆ-ನುಡಿ ಗಮನಿಸಿ, ನೇಮಕಾತಿ ನಡೆಯುತ್ತಿತ್ತು. ಅಧ್ಯಕ್ಷರ ಕಿವಿ ಮಾತೊಂದಿತ್ತು ಅಕ್ಕಮಹಾದೇವಿ ಶಿವಶರಣೆ ಹೆಸರಿಗೆ ಯಾವುದೇ ಚ್ಯುತಿ ಬರದ ಹಾಗೆ ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳುತ್ತಿದ್ದರು. ಅದನ್ನು ಅಕ್ಷರಶಃ ನಿಜ ಮಾಡಿದವರು ಅಲ್ಲಿಯ ಶಿಕ್ಷಕರು. ಹೆಣ್ಣು ಮಕ್ಕಳ ಶಾಲೆಯಾಗಿದ್ದರಿಂದ ಬಹುತೇಕ ಮಹಿಳಾ ಶಿಕ್ಷಕಿಯರೇ ನೇಮಕಗೊಂಡಿದ್ದು ಇತಿಹಾಸವೇ ಸರಿ. ಪ್ರತಿಯೊಬ್ಬ ಶಿಕ್ಷಕಿಯರು ಅಣಿಮುತ್ತುಗಳಾಗಿ ಮಾಡಿದ ಶಾಲೆ ಎಂದರೆ ತಪ್ಪಿಲ್ಲ. ಶಿಕ್ಷಕರು ವೈಯಕ್ತಿಕ ಬದುಕನ್ನೇ ಮರೆತು ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಮಾಡುವಲ್ಲಿ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸುವಲ್ಲಿ ಮುಂದಾಗಿದ್ದಾರೆ. ಒಬ್ಬ ವಿದ್ಯಾರ್ಥಿಯ ಯಶಸ್ಸು ಶಿಕ್ಷಕರ ನಿಸ್ವಾರ್ಥ ಸೇವೆಗೆ ಸಾಕ್ಷಿಯಾಗಿರುತ್ತದೆ.

ಇನ್ನೂ ಶಾಲಾ ಶಿಕ್ಷಣದ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕದ ಹೊರೆ ಇರಲಿಲ್ಲ. ಡೊನೇಷನ್ ಪದ್ಧತಿ ಇಲ್ಲವೇ ಇಲ್ಲ. ಅತ್ಯಂತ ಕಡಿಮೆ ಶುಲ್ಕ ಮೌಲ್ಯಯುತ ಶಿಕ್ಷಣವಿತ್ತು.

1962ರಲ್ಲಿಯೇ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ಎಸ್.ಎನ್. ಸೀತಮ್ಮ ಮೇಡಂರವರನ್ನು ಶಿವಮೊಗ್ಗದಿಂದ ಕರೆತಂದರು. (1962-1990) ಸೀತಮ್ಮ ಮೇಡಂರವರು ಸಂಸ್ಥೆಗೆ ಸುದೀರ್ಘ ಸೇವೆ ಸಲ್ಲಿಸಿ ಶಿಕ್ಷಣ ಇಲಾಖೆಯಿಂದ ಪ್ರಶಂಸೆಗೆ ಒಳಪಟ್ಟಿದ್ದರು. ಸಂಸ್ಥೆಯ ಅಧ್ಯಕ್ಷರು ಮೇಡಂಗೆ ಯಾವತ್ತೂ ಕಟ್ಟಳೆ ಹಾಕಿದವರಲ್ಲ. ಎಲ್ಲಾ ರೀತಿಯ ಸ್ವಾತಂತ್ರ್ಯವನ್ನೂ ಕೊಟ್ಟಿದ್ದರು.

ಅಂದಿನಿಂದ ಇಂದಿನವರೆಗೆ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಛಾಪನ್ನು ಮೂಡಿಸಿದ್ದಾರೆ. ಶಿಕ್ಷಕಿಯರು, ವೈದ್ಯರು, ಅಭಿಯಂತರರು, ವಿದೇಶಗಳಲ್ಲಿ, ನ್ಯಾಯಾಂಗ ಇಲಾಖೆ, ಆರಕ್ಷಕರು, ಅಧ್ಯಾತ್ಮಿಗಳು ( ಶ್ರೀ ಜಯಮೃತ್ಯುಂಜಯ ಸ್ವಾಮೀಜಿ), ರಾಜಕೀಯ ರಂಗ ಮಹಿಮಾ ಪಟೇಲ್ ಮಾಜಿ ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಅವರ ಮಗ ಸಹ ಇದೇ ಶಾಲೆಯಲ್ಲಿ ಓದಿದ್ದು ನಮಗೆ ಹೆಮ್ಮೆಯ ವಿಷಯವಾಗಿದೆ.

ಅಂದು ನಗರದಲ್ಲಿ ನಡೆದ 62ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾಗದದ ಪುಷ್ಪ ಪ್ರದರ್ಶನ ಮನಸೂರೆಗೊಂಡಿದ್ದು ಆಕರ್ಷಕವಾಗಿತ್ತು. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಏರ್ಪಡಿಸಿದ್ದ ಹೊಸ ಆವಿಷ್ಕಾರಗಳನ್ನು ಮಾಡಿ ಅಕ್ಕಮಹಾದೇವಿ ಶಾಲೆ ಸತತವಾಗಿ 6 ಬಾರಿ ಪ್ರಶಸ್ತಿ ಪಡೆದುಕೊಂಡಿದೆ.

ವಿಜ್ಞಾನ ಯೋಜನೆ ಮಂಡನೆಗೆ ರಾಷ್ಟ್ರಮಟ್ಟದಲ್ಲಿ 6ನೇ ಬಾರಿ ಭಾಗವಹಿಸಿ ಹಿರಿಯ ವಿಜ್ಞಾನಿಗಳ ಸಮಾವೇಶದಲ್ಲಿ ಭಾಗವಹಿಸಿರುವುದು ವಿಶಿಷ್ಟ ಸಾಧನೆಯಾಗಿದೆ. ವೀರಭದ್ರಪ್ಪನವರ ಶಾಲೆ ಎಂದರೆ ಶಿಕ್ಷಕರ ಚಿಂತನೆಯೊಂದು ಸಾಧನೆಯಾಗಿ ಅರಳುತ್ತಿರುವುದು ವಿಸ್ಮಯವೇ ಸರಿ. ಅಲ್ಲದೇ ಶಾಲೆಯ ಸಾಂಸ್ಕೃತಿಕ ಮತ್ತು ಕ್ರೀಡೆಯಲ್ಲಿ ಹಲವಾರು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದೆ.

ಶಿಕ್ಷಣದ ಜೊತೆ-ಜೊತೆಯಲ್ಲಿ ವಿವಿಧ ಪರೀಕ್ಷೆಗಳು ನಡೆಯುತ್ತಿದ್ದವು. ವಚನ ಗಾಯನ, ಯೋಗಾಸನ ತರಬೇತಿ, ಸ್ಕೌಟ್ಸ್ ಮತ್ತು ಗೈಡ್ಸ್, ರಾಮಾಯಣ ಮತ್ತು ಮಹಾಭಾರತ ಪರೀಕ್ಷೆಗಳು, ಹಿಂದಿ ಪರೀಕ್ಷೆಗಳು, ಚಿತ್ರಕಲೆ ಸ್ಪರ್ಧೆ ನಡೆಯುತ್ತಿತ್ತು. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದೆ.

ಸಂಸ್ಥಾಪಕರಾದ ವೀರಭದ್ರಪ್ಪ ಎಂ. ಚಿಗಟೇರಿಯವರ ಜನನ 14.11.1916ರಂದು ತಂದೆ ಮುರಿಗೆಪ್ಪ ಚಿಗಟೇರಿ, ತಾಯಿ ಗುರುಶಾಂತಮ್ಮ, ವಿದ್ಯಾಭ್ಯಾಸದ ಜೊತೆಗೆ ತಂದೆಯ ವ್ಯವಹಾರ ಮತ್ತು ಕೈಗಾರಿಕೆಗಳ ಪ್ರಗತಿ. ನಂತರದಲ್ಲಿ ಸಾಂಸಾರಿಕ ದೋಣಿಯಲ್ಲಿ ನಾವಿಕಳಾಗಿ ಬಂದಿದ್ದು ಶ್ರೀಮತಿ ಗುರುಬಸಮ್ಮನವರು ಬಾಳಸಂಗಾತಿಯಾಗಿದರು. ಒಟ್ಟು 4 ಜನ ಮಕ್ಕಳು (ಸುವರ್ಣ, ವೀರಣ್ಣ, ಶಿವಣ್ಣ ಮತ್ತು ಜಯವಿಭವ) ಸರಳ ಸಜ್ಜನಿಕೆಯ ಸಾಕಾರಾಮೂರ್ತಿ, ಶರಣ ಪರಂಪರೆಯಲ್ಲಿ ಬೆಳೆದವರು. ಶಿಕ್ಷಣ ಪ್ರೇಮಿಯಾಗಿ ಶಿಕ್ಷಣದ ದೀವಿಗೆಯನ್ನು ನಿಸ್ವಾರ್ಥತೆಯಿಂದ ಬೆಳಗಿಸುತ್ತಾ ಅದು ಇಂದಿಗೂ ಹುಣ್ಣಿಮೆ ಬೆಳಗಾಗಿ ಸಮಾಜಕ್ಕೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಬೆಳಗುತ್ತಾ ಬಂದಿದೆ. ನಗರದ ಅಕ್ಕಮಹಾದೇವಿ ಶಾಲೆ ಮತ್ತು ಮುರುಘರಾಜೇಂದ್ರ ಶಾಲೆಯ 60ನೇ ವರ್ಷದ ಸಂಭ್ರಮ ಇದೇ ಡಿಸೆಂಬರ್ 1, 2,3 ರಂದು ನಗರದ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲಾ ಆವರಣ, ವಿನೋಬನಗರದಲ್ಲಿ ಅದ್ದೂರಿಯಾಗಿ ನಡೆಯುತ್ತಿದೆ. ಸರ್ವರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವ ಮೂಲಕ ಆಕಾಶದಲ್ಲಿ ಇಂದು ನಕ್ಷತ್ರವಾಗಿ ಮಿನುಗುತ್ತಿರುವ ಶಾಲಾ ಸಂಸ್ಥಾಪಕರು ಸಂಭ್ರಮವನ್ನು ವೀಕ್ಷಿಸುತ್ತಿದ್ದಾರೆ ಎಂಬ ನಂಬಿಕೆಯೊಂದಿಗೆ ಬನ್ನಿ, ನಮ್ಮ ಹೆಜ್ಜೆ ಗುರುತನ್ನು ಮೂಡಿಸೋಣ.

**- ಮಂಜುಳಾ ಬಿ. ಸಂಗಮೇಶ,**
(ಹಳೆಯ ವಿದ್ಯಾರ್ಥಿನಿ)

# ರೈಲ್ವೆ ಸೇತುವೆ ನಿರ್ಮಾಣಕ್ಕೆ 49.26 ಕೋಟಿ ಮಂಜೂರು

**(1ನೇ ಪುಟದಿಂದ)** ನಿರಾಕರಿಸಿದ ಹಿನ್ನೆಲೆಯಲ್ಲಿ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್‌ರವರನ್ನು ಖುದ್ದು ಭೇಟಿ ಮಾಡಿ, ಸಮಸ್ಯೆ ವಿವರಿಸಿ ಸಂಪೂರ್ಣ ಹಣವನ್ನು ರೈಲ್ವೆ ಇಲಾಖೆಯಿಂದಲೇ ಭರಿಸುವಂತೆ ಒತ್ತಡ ಹೇರಿದ್ದ ಹಿನ್ನೆಲೆಯಲ್ಲಿ ಕೆಳಸೇತುವೆ ನಿರ್ಮಾಣಕ್ಕೆ ಭೂ-ಸ್ವಾಧೀನಕ್ಕೆ ಬೇಕಾಗುವ ವೆಚ್ಚವೂ ಸೇರಿ ಒಟ್ಟು 49.26 ಕೋಟಿ ರೂ. ಹಣವನ್ನು ರೈಲ್ವೆ ಸಚಿವಾಲಯವೇ ಮಂಜೂರು ಮಾಡಿದೆ ಎಂದವರು ತಿಳಿಸಿದ್ದಾರೆ.

ಶಾಂತಿ ಟಾಕೀಸ್ ಕಡೆಯಿಂದ ಬರುವ ವಾಹನಗಳು ರೈಲ್ವೆ ಹಳಿ ಪಕ್ಕದಲ್ಲಿರುವ ಕಿರವಾಡಿ ಹಾಗೂ ಇತರೆ ಜಮೀನಿನ ಮಾಲೀಕರ ಜಾಗದಲ್ಲಿ ನಿರ್ಮಾಣವಾಗಲಿರುವ 60 ಅಡಿ ಅಗಲದ ಸಮಾನಾಂತರ ರಸ್ತೆಯಲ್ಲಿ ಸಾಗಿ ಪದ್ಮಾಂಜಲಿ ಟಾಕೀಸ್ ಹತ್ತಿರ ನಿರ್ಮಾಣವಾಗಲಿರುವ ಎರಡು ಬೃಹತ್ ಗಾತ್ರದ ವೆಂಟ್‌ಗಳಲ್ಲಿ ಒಂದು ವೆಂಟ್ ಮೂಲಕ ಬಂದು ಈರುಳ್ಳಿ ಮಾರ್ಕೆಟ್ ಕಡೆಗೂ ಹಾಗೂ ಲಿಂಗೇಶ್ವರ ದೇವಸ್ಥಾನದ ಕಡೆಗೂ ಸಂಚರಿಸಬಹುದು. ಇನ್ನೊಂದು ವೆಂಟ್‌ನಲ್ಲಿ ಲಿಂಗೇಶ್ವರ ದೇವಸ್ಥಾನದ ಕಡೆಯಿಂದ ಶಾಂತಿ ಟಾಕೀಸ್ ರಸ್ತೆ ಕಡೆಗೆ ಹೋಗುವ ವಾಹನಗಳು ಸಂಚರಿಸಬಹುದು.

ಒಟ್ಟಾರೆ ರೈಲ್ವೆ ಹಳಿಗೆ ಸಮಾನಾಂತರವಾಗಿ ಸುಮಾರು 700 ರಿಂದ 800 ಮೀಟರ್ 60 ಅಡಿ ಅಗಲದ ಸಮಾನಾಂತರ ರಸ್ತೆ ನಿರ್ಮಾಣವಾಗಬೇಕಾಗಿದ್ದು, ಈ ರಸ್ತೆ ನಿರ್ಮಾಣಕ್ಕೆ ಬೇಕಾಗುವ ಭೂ ಸ್ವಾಧೀನದ ಹಣವನ್ನೂ ಸಹ ರೈಲ್ವೆ ಇಲಾಖೆಯೇ ಭರಿಸಲಿದೆ. ಒಟ್ಟಾರೆಯಾಗಿ ಕೆಳಸೇತುವೆ ನಿರ್ಮಾಣ ಯೋಜನೆಗೆ ಒಟ್ಟು ರೂ.49.26 ಕೋಟಿ ಹಣವನ್ನು ರೈಲ್ವೆ ಇಲಾಖೆಯೇ ಭರಿಸಿರುವುದರಿಂದ ರೈಲ್ವೆ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್‌ರವರಿಗೆ ಜನರಲ್ ಮ್ಯಾನೇಜರ್ ಸಂಜೀವ್ ಕಿಶೋರ್ ಅವರಿಗೆ ಸಂಸದ ಸಿದ್ದೇಶ್ವರ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಶೀಘ್ರವೇ ಜಿಲ್ಲಾಧಿಕಾರಿಗಳ ಜೊತೆ ಚರ್ಚಿಸಿ ಸಮಾನಾಂತರ ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನವಾಗಲಿರುವ ಭೂಮಾಲೀಕರ ಸಭೆಯನ್ನು ಇನ್ನೊಂದು ವಾರದೊಳಗೆ ಕರೆದು ಜಾಗ ನೀಡುವ ಕುರಿತು ಒಪ್ಪಿಗೆ ಪಡೆದು ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಿದರೆ ರೈಲ್ವೆ ಇಲಾಖೆ ಕಾಮಗಾರಿಗೆ ಟೆಂಡರ್ ಕರೆಯಲಿದೆ. ಈ ಪ್ರಕ್ರಿಯೆನ್ನು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು ಎಂದು ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ.

## ಶ್ಯಾಗಲೆಯಲ್ಲಿಂದು ಎನ್‌ಎಸ್‌ಎಸ್ ಶಿಬಿರದ ಸಮಾರೋಪ

ತಾಲ್ಲೂಕಿನ ಶ್ಯಾಗಲೆ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ದಾವಣಗೆರೆ ಇವರು ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾಂಭ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ. ಬೆಳಿಗ್ಗೆ 6.30 ಕ್ಕೆ ಧ್ವಜಾರೋಹಣವನ್ನು ಹಿರಿಯರಾದ ಎಸ್.ಎಂ. ವಾಮದೇವಯ್ಯ ನೆರವೇರಿಸಲಿದ್ದಾರೆ.

ದಾವಣಗೆರೆ ವಿವಿ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ವಿ. ಅಶೋಕ್ ಕುಮಾರ್ ಸಮಾರೋಪ ಭಾಷಣ ಮಾಡಲಿದ್ದಾರೆ. ಕಾಲೇಜಿನ ಪ್ರಾಂಶುಪಾಲದಾದ ಡಾ.ಎಂ. ಮಂಜಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಮಹಮದ್ ಅಲಿ, ರಶ್ಮಿ, ಲೋಹಿತ್ ಕುಮಾರ್, ಜಿ.ಎನ್. ಸತೀಶ್, ಬಸವರಾಜ, ಗುಡ್ಡದಮನೆ ಮನೆ, ಡಾ. ಟಿ. ಕರಿಬಸಪ್ಪ, ಗೌಸ್ ಖಾನ, ಕೆ. ಶ್ಯಾಮಲ, ಜಿ. ಕಾವ್ಯಶ್ರೀ ಮತ್ತಿತರರಿದ್ದರು.

## ಬೆಳೆ ನಷ್ಟ: 2 ಸಾವಿರ ರೂ.ಪರಿಹಾರ

**(1ನೇ ಪುಟದಿಂದ)** ಭೇಟಿ ಮಾಡಿದ್ದಾರೆ .

ಆದರೂ ಕೇಂದ್ರ ಇವತ್ತಿನವರೆಗೆ ಸಭೆ ನಡೆಸಿಲ್ಲ. ಪರಿಹಾರ ನೀಡುವ ಪ್ರಕ್ರಿಯೆಯನ್ನೇ ಶುರು ಮಾಡಿಲ್ಲ. ರಾಜ್ಯದ 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ ಆಗಿದೆ. ಕೇಂದ್ರ ಕೃಷಿ ಮತ್ತು ಗೃಹ ಸಚಿವರನ್ನು ನಾನೇ ಭೇಟಿ ಮಾಡಲು ಸಮಯ ಕೊಡಿ ಎಂದು ಪತ್ರ ಬರೆದಿದ್ದರೂ ಇವತ್ತಿನವರೆಗೂ ಸಮಯ ಕೊಟ್ಟಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಿತ್ತನೆ ವೈಫಲ್ಯ ಮತ್ತು ಮಧ್ಯಂತರ ವಿಮೆ ಪರಿಹಾರಕ್ಕೆ ರಾಜ್ಯ ಸರ್ಕಾರ ಈಗಾಗಲೇ 6.5 ಲಕ್ಷ ರೈತರಿಗೆ 460 ಕೋಟಿ ರೂ. ಬಿಡುಗಡೆ ಮಾಡಿದೆ. ಕುಡಿಯುವ ನೀರು , ಮೇವಿಗೆ 327 ಕೋಟಿ ರೂ. ಬಿಡುಗಡೆ, 780 ಕೋಟಿ ರೂ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿದೆ. ಅವರೂ ತಹಶೀಲ್ದಾರ್ ಗಳಿಗೆ ಬಿಡುಗಡೆ ಮಾಡಿದ್ದಾರೆ. ಯಾವ ತಾಲ್ಲೂಕುಗಳಲ್ಲೂ ಕುಡಿಯುವ ನೀರಿಗೆ ಸಮಸ್ಯೆ ಇಲ್ಲದಂತೆ ನಿರ್ವಹಿಸಿದ್ದೇವೆ. ಹಲವು ತಾಲ್ಲೂಕುಗಳ 60 ಹಳ್ಳಿಗಳಲ್ಲಿ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಿದ್ದೇವೆ. ಹೊರ ರಾಜ್ಯಕ್ಕೆ ಮೇವು ಹೋಗದಂತೆ ತಡೆದಿದ್ದೇವೆ. ಮೇವಿನ ಬೀಜ ವಿತರಣೆ ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

## ಡಾ. ರಮೇಶ್ ಅವರಿಗೆ ಸನ್ಮಾನ



ದಾವಣಗೆರೆ, ನ. 30- ಆಯುಷ್ ಇಲಾಖೆಯಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದ ಡಾ. ಎಂ.ಎಸ್. ರಮೇಶ್ ಅವರು ಪ್ರೊಫೆಸರ್ ಆಗಿ ಬಡ್ತಿ ಹೊಂದಿ ಶಿವಮೊಗ್ಗದ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯಕ್ಕೆ ಸ್ಥಳ ನಿಯುಕ್ತಿಗೊಂಡು ಇಂದು ಅಧಿಕಾರ ವಹಿಸಿಕೊಂಡಿದ್ದಾರೆ. ಸರ್ಕಾರಿ ನೌಕರರ ಸಂಘದ ನಿ.ಪೂ. ಜಿಲ್ಲಾಧ್ಯಕ್ಷ ಹಾಲೇಶಪ್ಪ ಅವರು ರಮೇಶ್ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ರೇಣುಕಾ ಮತ್ತು ಕು. ಸಿ.ಆರ್. ಶ್ರೀಧೃತಿ ಉಪಸ್ಥಿತರಿದ್ದರು.

# ಮಹಾಸಭಾ ಅಧಿವೇಶನಕ್ಕೆ ಹಂದರ ಕಂಬದ ಪೂಜೆ

**(1ನೇ ಪುಟದಿಂದ)** ಕಳಿಸಿಕೊಡಲಾಗುವುದು ಎಂದು ಹೇಳಿದರು. ಸಮಾವೇಶದಲ್ಲಿ 2 ಲಕ್ಷದಷ್ಟು ಜನರು ಭಾಗಿಯಾಗಲಿದ್ದಾರೆ. ಅವರಿಗಾಗಿ ಊಟ - ವಸತಿ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಅಧಿವೇಶನಕ್ಕಾಗಿ 300 ಅಡಿ ಉದ್ದ, 140 ಅಡಿ ಅಗಲದ ಪೆಂಡಾಲ್ ಹಾಕಲಾಗುವುದು ಎಂದು ತಿಳಿಸಿದರು. ಸಮಾವೇಶದಲ್ಲಿ ಸಮಾಜದ ಮುಖಂಡರು ಹಾಗೂ ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ. ಮುಂಬರುವ ದಿನಗಳಲ್ಲಿ ಆಹ್ವಾನಿತರ ಪಟ್ಟಿ ಹಾಗೂ ಸಮಾವೇಶದ ವೇಳಾಪಟ್ಟಿಯನ್ನು ರೂಪಿಸಲಾಗುವುದು ಎಂದು ಶಿವಶಂಕರಪ್ಪ ತಿಳಿಸಿದರು.

ಇದೇ ದಿನಾಂಕ 23ರ ಬೆಳಿಗ್ಗೆ 10.30ಕ್ಕೆ ಸಮಾವೇಶದ ಅಂಗವಾಗಿ ಮೆರವಣಿಗೆ ನಡೆಸಲಾಗುವುದು. 11.30ಕ್ಕೆ ಮೆರವಣಿಗೆ ಎಂ.ಬಿ.ಎ. ಮೈದಾನಕ್ಕೆ ಆಗಮಿಸಲಿದೆ. ನಂತರ ಸಮಾವೇಶದ ವೇದಿಕೆ ಕಾರ್ಯಕ್ರಮ ಚಾಲನೆ ಪಡೆದುಕೊಳ್ಳಲಿದೆ ಎಂದರು.

ಈ ಸಂದರ್ಭದಲ್ಲಿ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ, ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ಮುಖಂಡರಾದ ಬಿ.ಸಿ. ಉಮಾಪತಿ, ಅಣಬೇರು ರಾಜಣ್ಣ, ಜಿ. ಶಿವಯೋಗಪ್ಪ, ಶ್ರೀನಿವಾಸ ಶಿವಗಂಗಾ, ಕೆ.ಆರ್. ಸಿದ್ದೇಶ್, ಪುಷ್ಪಾ ವಾಲಿ, ಶುಭಾ ಐನಳ್ಳಿ, ಕೆ.ಜಿ. ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಜಗದ ಚಿಂತಕ - ಕನಕದಾಸರು

ಮಾನವ ಜನ್ಮದ ಉದ್ಧಾರಕ್ಕಾಗಿ
ಜನಿಸಿದರಿಲ್ಲಿ ಮಹಾ ಅವಧೂತ
ತಿರುಪತಿ ತಿಮ್ಮಪ್ಪನ ಕರುಣೆಯಲಿ
ಬೀರಪ್ಪ,ಬಚ್ಚಮ್ಮನ ಸುತ ತಿಮ್ಮಪ್ಪ.

ಸಿರಿವಂತಿಕೆಯನು ದೂರದಿ ಸರಿಸುತ
ದಾನ, ಧರ್ಮವೇ ಶ್ರೇಷ್ಠ ಎನ್ನುತಲಿ
ತತ್ವ, ಸಿದ್ಧಾಂತದ ಗೀತೆಯ ಹಾಡುತ
ತಂಬೂರಿ ಮೀಟುತ ಸಾರವ ಸಾರುತಲಿ.

ಕುಲ, ಕುಲವೆಂದು ಹೊಡೆದಾಡದಿರೆನ್ನುತ
ತಾರ್ಕಿಕ ಮೌಲ್ಯವ ಎಲ್ಲೆಡೆ ಹರಡುತ
ದಾಸವಾಣಿ ಸಂಕೀರ್ತನೆಯಲ್ಲಿ ನಲಿಸುತ
ಕಾಗಿನೆಲೆಯ ಆದಿಕೇಶವ ನಾಮಾಂಕಿತ ಕನಕ.

ಮೂಢತೆಯನು ಸರಿಸಿ ಜ್ಞಾನವ ಬೆಳಗಿಸಿ
ಭಕ್ತಿ,ಭಾವದಲಿ ಜನಮನದಲಿ ಹೊಮ್ಮಿಸಿ
ಸಂಕೀರ್ತನೆಯಲ್ಲಿ ಭಕ್ತಸಾಗರ ಸೆಳೆಯುತಲಿ
ಕನಕದಾಸರೆಂದೂ ಜನಮಾನಸದಲ್ಲಿಹರು.

ಗುರು ವ್ಯಾಸರು ನೀಡಿದ ಕನಕ ದಾಸ ಬಿರುದು
ಭಕ್ತಿ ಪರಾಕಾಷ್ಠೆಗೆ ಕನಕ ಕಿಂಡಿ ಯೇ ಹಿರಿದು.
ಶ್ರೀಕೃಷ್ಣನೇ ವೊಗ ತೋರಿದ ನಿನ್ನಯ ಭಕ್ತಿಗೆ
ಮಾನವ ಕುಲ ನಮಿಸುತ್ತದೆ ಸದಾ ನಿನ್ನಯ ಶಕ್ತಿಗೆ.

**- ವೀಣಾ ಕೃಷ್ಣಮೂರ್ತಿ, ದಾವಣಗೆರೆ**

## ಸಮೀಕ್ಷೆ: 2 ಕಾಂಗ್ರೆಸ್, 2 ಬಿಜೆಪಿ, 1 ಅತಂತ್ರ

**(1ನೇ ಪುಟದಿಂದ)** ಬಿಜೆಪಿ 100-122 ಹಾಗೂ ಕಾಂಗ್ರೆಸ್ 62 - 85 ಸ್ಥಾನ ಪಡೆಯಲಿವೆ. ಟಿವಿ9 ಭರತವರ್ಷ ಪೋಲ್‌ಸ್ಟ್ರಾಟ್ ಪ್ರಕಾರ ಬಿಜೆಪಿ 100-110 ಹಾಗೂ ಕಾಂಗ್ರೆಸ್ 90 – 100 ಸ್ಥಾನ ಗಳಿಸಲಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ಆಡಳಿತವಿದೆ.

ಛತ್ತೀಸ್‌ಘಡದ 90 ಸ್ಥಾನಗಳ ಪೈಕಿ ಬಿಜೆಪಿ 36 – 48 ಸ್ಥಾನ ಪಡೆಯಲಿದೆ ಹಾಗೂ ಕಾಂಗ್ರೆಸ್ 41-53 ಸ್ಥಾನ ಪಡೆಯಲಿದೆ ಎಂದು ಎಬಿಪಿ ನ್ಯೂಸ್ - ಸಿ ವೋಟರ್ ಸಮೀಕ್ಷೆ ತಿಳಿಸಿದೆ. ಇಂಡಿಯಾ ಟುಡೇ - ಆಕ್ಸಿಸ್ ಮೈ ಇಂಡಿಯಾ ಪ್ರಕಾರ ಬಿಜೆಪಿ 36 – 46 ಹಾಗೂ ಕಾಂಗ್ರೆಸ್ 40-50 ಸ್ಥಾನ ಪಡೆಯಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿದೆ. 119 ಸ್ಥಾನಗಳಿರುವ ತೆಲಂಗಾಣದಲ್ಲಿ ಕಾಂಗ್ರೆಸ್ 63-79 ಸ್ಥಾನ ಪಡೆಯಲಿದೆ ಎಂದು ಇಂಡಿಯಾ ಟಿವಿ - ಸಿಎನ್‌ಎಕ್ಸ್ ತಿಳಿಸಿದೆ. ಆಡಳಿತಾರೂಢ ಬಿ.ಆರ್.ಎಸ್. 31 - 47 ಸ್ಥಾನ ಪಡೆಯಲಿದೆ. ಜನ್ ಕಿ ಬಾತ್ ಸಮೀಕ್ಷೆಯ ಪ್ರಕಾರ ಕಾಂಗ್ರೆಸ್ 48 -64 ಸ್ಥಾನ ಪಡೆಯಲಿದೆ ಹಾಗೂ ಬಿಆರ್‌ಎಸ್ 40-55 ಸ್ಥಾನ ಗಳಿಸಲಿದೆ. 40 ಸ್ಥಾನಗಳಿರುವ ಮಿಜೋರಾಂನಲ್ಲಿ ಆಡಳಿತಾರೂಢ ಎಂ.ಎನ್.ಎಫ್. 14-18 ಸ್ಥಾನ ಪಡೆಯಲಿದೆ, ಝುಡ್‌ಪಿಎಂ 12-16 ಸ್ಥಾನ ಪಡೆಯಲಿದೆ ಎಂದು ಇಂಡಿಯಾ - ಸಿ.ಎನ್.ಎಕ್ಸ್. ಸಮೀಕ್ಷೆ ತಿಳಿಸಿದೆ. ಎಬಿಪಿ ನ್ಯೂಸ್ - ಸಿ ವೋಟರ್ ಸಮೀಕ್ಷೆಯ ಪ್ರಕಾರ ಎಂ.ಎನ್.ಎಫ್. 15-21 ಹಾಗೂ ಝುಡ್‌ಪಿಎಂ 12-18 ಸ್ಥಾನ ಗಳಿಸಲಿದೆ.


**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್‌ಕಾಲೋನಿಯಲ್ಲಿ, 70x62 Corner, 30x62 Corner, 40x62 West, 30x50 East, 30x52 North, 40x40 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ನಿಜಲಿಂಗಪ್ಪ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ, ಎಸ್.ಎಸ್.'ಎ' ಬ್ಲಾಕ್, ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್.
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್‌ಎಂ., ಎಎನ್‌ಎಂ
91486 83185, 95355 32369

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಮಹಿಳೆಯರು, ಪಿಗ್ಮಿ ಕಲೆಕ್ಟರ್ ಪಾರ್ಟ್‌ಟೈಮ್ ಕೆಲಸಕ್ಕೆ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ
79751 07268

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್ ದಾವಣಗೆರೆ.
99642 12379

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು.
ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಸುಸಜ್ಜಿತ ಹೋಟೆಲ್ ಕೊಡುವುದಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ. (ಕಟ್ಟಡ ಹೊರತುಪಡಿಸಿ) ಸಂಪರ್ಕಿಸಿ:
7760005504, 9986445843
What's app : 8105676876

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ.
ಸಂಪರ್ಕಿಸಿ:
08192 254736

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಲೀಸ್‌ಗೆ ಇದೆ**
# 679 ಕಸ್ತೂರಬಾ ಬಡಾವಣೆ, 9ನೇ ರಸ್ತೆ, ದಾವಣಗೆರೆ.
1 BHK
(ಸಸ್ಯಹಾರಿಗಳಿಗೆ ಮಾತ್ರ)
94801 11416, 94800 00417

**WANTED**
Female Candidate having the degree of Commerce is required to work in Auditor office. Contact : B.G. Basavarajappa, # 43H, S.J.J.M. Complex, Jayadeva Circle, Hadadi Road, Davanagere.
Mob : 99001 42052

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿ.ಯು.ಸಿ. ಮುಗಿಸಿದ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೆ. ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
# 43H, ಎಸ್.ಜೆ.ಜೆ.ಎಮ್. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ.
99001 42052
ಸಮಯ - 1PM - 5PM

**Need Computer Operater**
Near Ram & Co. Circle
Male Only
70221 58935

**FLAT FOR LEASE**
2BHK North facing 1325 Sqft. Adress : AM apartment, Nainika prime rose, Vidyanagara city bus last stop, Davanagere.
89519 38228

**ಅಂಕಪಟ್ಟಿ ಕಳೆದಿದೆ**
ನಾನು ಆಯಿಷಾ ತಬಸ್ಸುಮ್ ಕೆ.ಎಂ., # 18, 4ನೇ ಮಹಡಿ, 1ನೇ ಮೇನ್, 1ನೇ ಕ್ರಾಸ್, ಬೆಂಗಳೂರು ದಕ್ಷಿಣ, ಬೆಂಗಳೂರು-560011 ವಾಸಿಯಾಗಿದ್ದು, ನನ್ನ 10ನೇ ತರಗತಿ ಅಂಕಪಟ್ಟಿ ರಿ.ನಂ.20040424032 ದಾವಣಗೆರೆಯಲ್ಲಿ ದಿನಾಂಕ 30.11.2023ರಂದು ಕಳೆದಿರುತ್ತದೆ. ಸಿಕ್ಕವರು ಮೇಲ್ಕಂಡ ವಿಳಾಸಕ್ಕೆ ತಲುಪಿಸಲು ಅಥವಾ ನನ್ನ ಮೊ.ನಂ.9945265432ಗೆ ತಿಳಿಸಲು ಕೋರುತ್ತೇನೆ.

**ಬೇಕಾಗಿದ್ದಾರೆ**
Receptionist ಕೆಲಸಕ್ಕೆ ಬೇಕಾಗಿದ್ದಾರೆ, ಸಂಬಳ 8000/-
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
94816 91053

**ರಕ್ತ ದಾನ ಶ್ರೇಷ್ಠ ದಾನ**

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪಿಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.
ಸಂಪರ್ಕಿಸಿ: Glamorous Studio
ಗಿರೀಜ - ಮೇಕಪ್ ಆರ್ಟಿಸ್ಟ್
94817 76305

**ಮನೆ ಬಾಡಿಗೆಗೆ ಇದೆ**
ಸಸ್ಯಹಾರಿಗಳಿಗೆ ಮಾತ್ರ
ಮೊದಲನೆ ಮಹಡಿ, 2 ಬೆಡ್ ರೂಮ್‌ವುಳ್ಳ ಮನೆ ಬಾಡಿಗೆಗೆ ಇದೆ, ಕೆ.ಟಿ.ಜೆ. ನಗರ, 2ನೇ ಮೇನ್, 15ನೇ ಕ್ರಾಸ್, ದಾವಣಗೆರೆ. ಸಂಪರ್ಕಿಸಿ :
98444 99983

**ಬೇಕಾಗಿದ್ದಾರೆ**
ಫೋಟೋ ಸ್ಟುಡಿಯೋದಲ್ಲಿ ರಿಸೆಪ್ಷನಿಸ್ಟ್ ಆಗಿ ಕೆಲಸ ಮಾಡಲು ಕಂಪ್ಯೂಟರ್ ಬೇಸಿಕ್ ಗೊತ್ತಿರುವ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
63600 59699, 90608 35341

**ಬೇಕಾಗಿದ್ದಾರೆ**
ತಕ್ಷಣ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹೆಲ್ಪರ್ ಮತ್ತು ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. SSLC ಅಥವಾ PUC ಪಾಸಾಗಿದ್ದರೆ ಸೂಕ್ತ.
ಸಂಪರ್ಕಿಸಿ :
96633 66710

**FOR SALE**
32.5x20.5 (3bhk) and 15.5x20.5 (Duplex) 2nd Main, 1st Cross, PJ Extension, Raithara Beedi, Davangere.
99165 95733
87479 44084

**ಸಾರ್ವಜನಿಕ ಪ್ರಕಟಣೆ**
ನನ್ನ ಕಕ್ಷಿದಾರರಾದ ರೇವಣಸಿದ್ದಪ್ಪ ಬಿನ್ ಕರಿಬಸಪ್ಪ (ಮೊಬೈಲ್ ನಂ.6360611661. 9008250843) ದೊಡ್ಡಬಾತಿ ದಾವಣಗೆರೆ ತಾಲ್ಲೂಕು ಇವರು ದೊಡ್ಡಬಾತಿ ಗ್ರಾಮದ ವಾಸಿಗಳಾದ ಬಿ.ಜಿ. ಮಂಜುನಾಥ್ ಬಿನ್ ಬಿ.ಜಿ. ರೇವಣಸಿದ್ದಪ್ಪ (ಮೊ. 8747581530) ಇವರಿಂದ ದೊಡ್ಡಬಾತಿ ಗ್ರಾಮದ ಸರಹದ್ದಿಗೆ ಸೇರಿದ ರೇವಣಸಿದ್ದೇಶ್ವರ ದೇವಸ್ಥಾನದ ಹತ್ತಿರ ಇರುವ ಪಂಚಾಯಿತಿ ನಂ. 60/2 ಇ-ಸ್ವತ್ತು ನಂ. 151200201400101892 ಅಳತೆ 28x100 ಅಡಿ ಉಳ್ಳ ಖಾಲಿ ನಿವೇಶನವನ್ನು ಖರೀದಿಸಲು ಇಚ್ಛಿಸಿರುತ್ತಾರೆ. ಆದ ಕಾರಣ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು ಇದ್ದಲ್ಲಿ ಅಥವಾ ತಂಟೆ-ತಕರಾರು ಇದ್ದಲ್ಲಿ ತಮ್ಮ ತಕರಾರನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ನನ್ನ ಕಛೇರಿಗೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಲಾಗುವುದು. 7 ದಿನಗಳು ಮುಗಿದ ನಂತರ ಬಂದ ತಕಾರಾರಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ತಿಳಿಯಿರಿ.

ಕೆ.ಬಿ. ಶೈಲಾಶ್ರೀ
ವಕೀಲರು, # 1963/1,2
SS ಲೇಔಟ್, ಎ ಬ್ಲಾಕ್,
ಒಳಾಂಗಣ ಕ್ರೀಡಾಂಗಣ ಹತ್ತಿರ,
ದಾವಣಗೆರೆ.
ಮೊ. : 9448658502

ಸಹಿ/- ಕೆ.ಬಿ. ಶೈಲಾಶ್ರೀ
ಬಿ.ಎಸ್ಸಿ ಎಲ್.ಎಲ್.ಬಿ., ಪಿಜಿಡಿಎಂ
ವಕೀಲರು KAR-70/98

**Site For Sale**
30x40 North West Corner, Behind SS Hi-Tech Hospital, Davangere.
96069 04902

**ನೂತನವಾಗಿ ಪ್ರಾರಂಭವಾಗಿದೆ**
ಶ್ರೀ ವಾಸವಿ ಪಿಜ್ಜಾ & ಚಾಟ್ ಸೆಂಟರ್
ಗುಂಡಿ ಸರ್ಕಲ್, ದಾವಣಗೆರೆ. ಎಲ್ಲಾ ತರಹದ ರುಚಿಕರವಾದ ಪಿಜ್ಜಾಗಳು ಹಾಗೂ ಚಾಟ್ ಗಳು ರಿಯಾಯಿತಿ ದರದಲ್ಲಿ ದೊರೆಯುತ್ತವೆ.ಸಂಪರ್ಕಿಸಿ

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮತ್ತು ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿ.
87924 53686

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್
ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 15000 (ESI, PF, ಸೌಲಭ್ಯವಿರುತ್ತದೆ) ಸ್ಥಳ: ಮೈಸೂರು.
98450 10281

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 12ನೇ ಕ್ರಾಸ್, 5ನೇ ಮೇನ್, # 1978/3, ಶ್ರೀನಿಧಿ 30x50 ನಿವೇಶನದಲ್ಲಿ ನಿರ್ಮಿಸಿರುವ 1200 ಚ. ವಿಸ್ತೀರ್ಣ, 2 BHK ಮನೆ ಮಾರಾಟಕ್ಕಿದೆ.
ಶ್ರೀ ಡಿ. ವೆಂಕಟೇಶ್ ರಾವ್
95357 81770

**AVAILABLE FOR RENT**
Office / Commercial Space
Size : 20x45 Basement, Ground floor & First floor, Address : Lawyer Road, K.B Extesnion, Davanagere.
Contact :
98442 61046, 87225 81400

**ಬೇಕಾಗಿದ್ದಾರೆ**
S.V. Sales Corporation, Davangere.
* ಅಂಗಡಿಯಲ್ಲಿ ಕೆಲಸ ಮಾಡುವವರು
* ಟಾಟಾ ಏಸ್ ಡ್ರೈವರ್ ಬೇಕಾಗಿದ್ದಾರೆ.
* ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ.
6362023451, 9743437003

**ಬೇಕಾಗಿದ್ದಾರೆ**
ಆಪ್ಟಿಕಲ್ ಶೋ ರೂಂನಲ್ಲಿ ಕಾರ್ಯ ನಿರ್ವಹಿಸಲು ಅನುಭವಿ ಸೇಲ್ಸ್‌ಮನ್‌ಗಳು ಮತ್ತು Opthometristಗಳು ಬೇಕಾಗಿದ್ದಾರೆ.
81970 72702

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



## ಕನಕ ಜಯಂತಿ ಮೆರವಣಿಗೆಗೆ ಕಲಾ ತಂಡಗಳ ಮೆರಗು

ದಾವಣಗೆರೆ, ನ. 30- ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯುತ್ಸವ ಮೆರವಣಿಗೆಗೆ ವಿವಿಧ ಜಾನಪದ ಕಲಾತಂಡಗಳು ಮೆರಗು ತಂದವು. ಡೊಳ್ಳು, ವೀರಗಾಸೆ, ಗೊಂಬೆ ಕುಣಿತ, ಕೀಲು ಕುದುರೆ, ನಾಸಿಕ್ ಡೋಲು ಸೇರಿದಂತೆ ವಿವಿಧ ಕಲಾತಂಡಗಳು ಗಮನ ಸೆಳೆದವು. ನಗರ ದೇವತೆ ದುರ್ಗಾಂಬಿಕಾ ದೇವಸ್ಥಾನದ ಬಳಿ ಇರುವ ವೃತ್ತದಿಂದ ಹೊರಟ ಮೆರವಣಿಗೆಯು ವಿವಿಧ ಬೀದಿಗಳಲ್ಲಿ ಸಂಚರಿಸಿ, ನಂತರ ಪಿ.ಬಿ. ರಸ್ತೆಯಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಮುಕ್ತಾಯಗೊಂಡಿತು.

ಮೆರವಣಿಗೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಸಿಇಓ ಸುರೇಶ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಮೇಯರ್ ವಿನಾಯಕ ಪೈಲ್ವಾನ್, ತಹಶೀಲ್ದಾರ್ ಅಶ್ವತ್ಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ನಿರ್ದೇಶಕ ರವಿಚಂದ್ರ, ಮತ್ತಿತರರು ಭಾಗವಹಿಸಿದ್ದರು.

# ಸಮ ಸಮಾಜ ನಿರ್ಮಾಣ ಕನಕದಾಸರ ಆಶಯ

### ಜಿಲ್ಲಾಡಳಿತದಿಂದ ಕನಕ ದಾಸರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ

ದಾವಣಗೆರೆ, ನ. 30 - ಸಮಾಜದಲ್ಲಿ ಅಸಮಾನತೆ ತೊಡೆದು ಹಾಕಿ ಸಮ ಸಮಾಜ ನಿರ್ಮಾಣದ ಆಶಯವೇ ಕನಕದಾಸರದ್ದಾಗಿತ್ತು. ಕೀರ್ತನೆಗಳ ಮೂಲಕವೇ ಸಮಾಜ ಬದಲಾವಣೆಗೆ ಶ್ರಮಿಸಿದ್ದರು ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಿಲ್ಲಾ ಹೋರಾಟ ಸಮಿತಿ ಹಾಗೂ ಸಮಾಜದ ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಪಿ.ಬಿ ರಸ್ತೆಯಲ್ಲಿರುವ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹನ್ನೆರಡನೇ ಶತಮಾನದ ಬಸವಣ್ಣ, ಹದಿನಾರನೇ ಶತಮಾನದ ಕನಕದಾಸರು ಸೇರಿದಂತೆ ಅನೇಕ ದಾರ್ಶನಿಕರು ನಾಡಿನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಸಮಾನತೆಗಾಗಿ ಯಾವುದೇ ಹೋರಾಟ ಮಾಡದೇ, ಕೇವಲ ವಚನ, ಸಾಹಿತ್ಯ, ಕೀರ್ತನೆಗಳ ಮೂಲಕ ಸಮ ಸಮಾಜದ ನಿರ್ಮಾಣಕ್ಕೆ ಹಾಗೂ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳುವ ಮಾರ್ಗವನ್ನು ತಿಳಿಸಿಕೊಟ್ಟಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರೂ ಮೊಬೈಲ್‌ಗಳಿಗೆ ದಾಸರಾಗಿದ್ದು, ಅದರ ಸದ್ಬಳಕೆ ಮಾಡಿಕೊಳ್ಳುವ ಅಗತ್ಯವಿದೆ. ಮೊಬೈಲ್ ಮೂಲಕ ವಚನ ಸಾಹಿತ್ಯ, ದಾಸರ ಕೀರ್ತನೆಗಳನ್ನು ಅಧ್ಯಯನ ಮಾಡುವ ಮೂಲಕ ಸಮಾಜವನ್ನು ಒಗ್ಗೂಡಿಸಲು ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಹಗರಿಬೊಮ್ಮನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ. ಕೆ. ವೆಂಕಟೇಶ್ ಮಾತನಾಡಿ, ಶೂದ್ರ ಮತ್ತು ದಲಿತ ಪರಂಪರೆಗೆ ಸುದೀರ್ಘ ಚರಿತ್ರೆ ಇದೆ. ಸಂತ ಕನಕದಾಸರು ಸಮಾಜದ ಎಲ್ಲಾ ವರ್ಗದವರಿಗೆ ಒಂದು ನಿಧಿ ಇದ್ದಂತೆ. 16ನೇ ಶತಮಾನದಲ್ಲಿ ನಡೆದ ದಾಸ ಚಳವಳಿಗೆ ವಿಶೇಷವಾದ ಮಹತ್ವ ದೊರತಿದ್ದು, ಕನಕದಾಸರ ಪ್ರವೇಶದಿಂದ ಎಂದರು.

ಕನ್ನಡ ಸಾಹಿತ್ಯ ಚಳವಳಿಯ ಮೂಲಕ ಸಮಾಜದ ಭಿನ್ನಾಭಿಪ್ರಾಯವನ್ನು ತೊಡೆದು ಹಾಕುವಲ್ಲಿ ಹೋರಾಡಿದ ಸಂತ ಕವಿ ಕನಕದಾಸರು. ಅವರು ದುಡಿಯುವ ಹಾಗೂ ಶೋಷಿತ ವರ್ಗವನ್ನು ಪ್ರತಿನಿಧಿಸಿದ ಏಕೈಕ ವ್ಯಕ್ತಿಯಾಗಿದ್ದಾರೆ ಎಂದು ಸ್ಮರಿಸಿದರು.

ವೈದಿಕರ ಆವರಣವನ್ನು ಪ್ರವೇಶಿಸಿದ ಏಕೈಕ ಶೂದ್ರ, ಸಂತ ಕನಕದಾಸರು. ಅವರನ್ನು ಸಂತರನ್ನಾಗಿ, ಭಕ್ತರನ್ನಾಗಿ, ದಾಸರನ್ನಾಗಿ ನೋಡುತ್ತೇವೆ. ಆದರೆ ಅವರು ಒಬ್ಬ ಸಮಾಜ ಸೇವಕರಾಗಿದ್ದಾರೆ, ಸಮಾನತೆ ಪ್ರತಿಪಾದಿಸುವ ಮೂಲಕ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಇನ್‌ಸೈಟ್ಸ್ ಐಎಎಸ್ ತರಬೇತಿ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಮಾತನಾಡಿ, ಕನಕದಾಸರು ಅಂದು ತೋರಿದ ಧೈರ್ಯ, ಸ್ಥೈರ್ಯವನ್ನು ಇಂದು ನಾವೆಲ್ಲಾ ತೋರುವ ಮೂಲಕ ಕನಕದಾಸರಾಗಬೇಕಿದೆ. 16 ನೇ ಶತಮಾನದಲ್ಲಿ ಕನಕದಾಸರು ಅನುಭವಿಸಿದ ಕಷ್ಟಗಳನ್ನೇ ಇಂದಿನ ಶತಮಾನದಲ್ಲೂ ಅನುಭವಿಸುತ್ತಿದ್ದೇವೆ ಎಂದರು.

ಸಮಾಜದಲ್ಲಿ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದ್ದು, ನಾವು ಅಂತಹ ವಿಷ ವರ್ತುಲದಿಂದ ಹೊರ ಬಂದು ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ. ಯಾವುದೇ ಪ್ರಭುತ್ವ, ಆಡಳಿತಕ್ಕೆ ದಾಸರಾಗದೇ, ಸ್ವಶಕ್ತಿ, ಸ್ವಂತ ಆಲೋಚನೆಯಿಂದ ಮುಂದೆ ಬಂದು ಸಮಾಜ ಬದಲಾವಣೆಗೆ ಕಾರಣರಾಗಬೇಕಾಗಿದೆ ಎಂದು ಹೇಳಿದರು.

ಸಮಾಜದ ಗುರುಗಳಾದ ಶಿವಕುಮಾರ್ ಒಡೆಯರ್, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಬಿ.ಹೆಚ್. ಪರಶುರಾಮಪ್ಪ ಮತ್ತಿತರರು ಮಾತನಾಡಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್, ಸಂತೋಷ್, ದಾಸಶ್ರೇಷ್ಠ ಶ್ರೀ ಕನಕದಾಸರು ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಿಲ್ಲಾ ಹೋರಾಟ ಸಮಿತಿ ಅಧ್ಯಕ್ಷ ಬಿ. ರಮೇಶ್, ದುರ್ಗಾಂಬಿಕಾ ದೇವಸ್ಥಾನ ಧರ್ಮದರ್ಶಿ ಗೌಡ್ರ ಚನ್ನಬಸಪ್ಪ, ಮಾಜಿ ಮಹಾಪೌರ ಹೆಚ್.ಬಿ. ಗೋಣೆಪ್ಪ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಜಿ.ಪಂ. ಸಿಇಓ ಸುರೇಶ್ ಇಟ್ನಾಳ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ನಿರ್ದೇಶಕ ರವಿಚಂದ್ರ, ಜಿ.ಪಂ. ಮಾಜಿ ಸದಸ್ಯ ಜಿ.ಸಿ. ನಿಂಗಪ್ಪ, ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ವೈ. ವಿರುಪಾಕ್ಷಪ್ಪ, ಮುಖಂಡರಾದ ಎಸ್.ಎಲ್. ಆನಂದಪ್ಪ, ಆಶಾ ಉಮಾಶಂಕರ್, ಗೀತಾ ದಿಳ್ಳೆಪ್ಪ, ಜೆ.ಡಿ. ಪ್ರಕಾಶ್, ಕನಕ ಬ್ಯಾಂಕ್ ಮಾಜಿ ಅಧ್ಯಕ್ಷ ಹೆಚ್.ಜಿ. ಸಂಗಪ್ಪ, ಎನ್.ಜೆ. ನಿಂಗಪ್ಪ, ಅಡಾಣಿ ಸಿದ್ದಪ್ಪ, ಫುಟ್‌ಬಾಲ್ ಗಿರೀಶ್, ಟಿ. ಎಸ್. ಶಿವಣ್ಣ ಮಾಸ್ತರ್, ಗೌಡ್ರು ಕಳಸಪ್ಪರ ಚನ್ನಪ್ಪ, ಐರಣಿ ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

## ಕೇಜ್ರಿವಾಲ್ ಬಂಧಿಸಿದರೂ ಸಿಎಂ ಆಗಿರಬೇಕೇ ?

### ಇಂದಿನಿಂದ ಆಮ್ ಆದ್ಮಿ ಪಾರ್ಟಿಯಿಂದ ಜನಾಭಿಪ್ರಾಯ ಸಂಗ್ರಹ

ನವದೆಹಲಿ, ನ. 30 - ಅರವಿಂದ ಕೇಜ್ರಿವಾಲ್ ಬಂಧನಕ್ಕೊಳಗಾದರೆ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೇ ಎಂಬ ಬಗ್ಗೆ ಡಿಸೆಂಬರ್ 1ರಿಂದ 20ರವರೆಗೆ ಜನಾಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಆಮ್ ಆದ್ಮಿ ಪಾರ್ಟಿ ನಗರ ಸಂಚಾಲಕ ಗೋಪಾಲ್ ರಾಯ್ ತಿಳಿಸಿದ್ದಾರೆ.

ಸಂಸದ ರಾಘವ್ ಛಡ್ಡ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಯ್, ನಕಲಿ ಮದ್ಯ ಹಗರಣದಲ್ಲಿ ಕೇಜ್ರಿವಾಲ್ ಬಂಧಿಸಲು ಬಿಜೆಪಿ ಸಂಚು ನಡೆಸಿದೆ. ಆಮ್ ಆದ್ಮಿ ಪಾರ್ಟಿ ಮುಗಿಸಲು ಈ ಸಂಚು ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಶುಕ್ರವಾರದಿಂದ 'ಮೇ ಭಿ ಕೇಜ್ರಿವಾಲ್' (ನಾನೂ ಕೇಜ್ರಿವಾಲ್) ಎಂಬ ಅಭಿಯಾನ ನಡೆಸಲಾಗುವುದು. ನಗರದ 2,600 ಮತಗಟ್ಟೆಗಳಲ್ಲಿ ಸಹಿ ಅಭಿಯಾನ ನಡೆಸಲಾಗುವುದು. ಕೇಜ್ರಿವಾಲ್ ಬಂಧನಕ್ಕೊಳಗಾದರೆ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕೇ? ಎಂಬ ಬಗ್ಗೆ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದವರು ಹೇಳಿದರು.

ಈ ಬಗ್ಗೆ ಕೇಜ್ರಿವಾಲ್ ಅವರು ಆಮ್ ಆದ್ಮಿ ಪಾರ್ಟಿ ಶಾಸಕರು ಹಾಗೂ ಪಾಲಿಕೆ ಸದಸ್ಯರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಕೇಜ್ರಿವಾಲ್ ರಾಜೀನಾಮೆ ನೀಡಬಾರದು ಹಾಗೂ ಜೈಲಿನಿಂದಲೇ ಸರ್ಕಾರ ನಡೆಸಬೇಕು ಎಂಬುದು ಅವರ ನಿಲುವು ಎಂದು ರಾಯ್ ಹೇಳಿದರು.

## ಎಂಟು ಪ್ರಮುಖ ವಲಯಗಳಲ್ಲಿ ಶೇ.12.1ರ ಬೆಳವಣಿಗೆ

ಅಕ್ಟೋಬರ್, ನ. 30 – ಎಂಟು ಪ್ರಮುಖ ವಲಯಗಳ ಬೆಳವಣಿಗೆ ದರ 2023ರ ಅಕ್ಟೋಬರ್ ತಿಂಗಳಲ್ಲಿ ಶೇ.12.1ರಷ್ಟಿತ್ತು. ಕಳೆದ ವರ್ಷ ಇದೇ ತಿಂಗಳಲ್ಲಿ ಬೆಳವಣಿಗೆ ದರ ಶೇ.0.7ರಷ್ಟಿತ್ತು.

ಕಲ್ಲಿದ್ದಲು, ಉಕ್ಕು, ಸಿಮೆಂಟ್ ಹಾಗೂ ವಿದ್ಯುತ್ ವಲಯದಲ್ಲಿ ಹೆಚ್ಚಿನ ಬೆಳವಣಿಗೆಯಾಗಿದೆ ಎಂದು ಅಧಿಕೃತ ಅಂಕಿ ಅಂಶಗಳು ತಿಳಿಸಿವೆ. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಬೆಳವಣಿಗೆ ದರ ಶೇ.9.2ರಷ್ಟಿತ್ತು.

# ಟಾಟಾ ಟೆಕ್ನಾಲಜಿ ಷೇರು ಮೊದಲ ದಿನವೇ ಶೇ.163ರ ಏರಿಕೆ

ನವದೆಹಲಿ, ನ. 30 – ಟಾಟಾ ಟೆಕ್ನಾಲಜಿ ಷೇರುಪೇಟೆಯಲ್ಲಿ ಮೊದಲ ದಿನವೇ ಶೇ.163ರ ಭರ್ಜರಿ ಏರಿಕೆ ಕಂಡಿದೆ. ಟಾಟಾ ಸಮೂಹಕ್ಕೆ ಸೇರಿದ ಟಾಟಾ ಟೆಕ್ನಾಲಜಿಯ ಆರಂಭಿಕ ಬೆಲೆ 500 ರೂ. ಆಗಿದ್ದರೆ, ದಿನದ ಅಂತ್ಯದ ವೇಳೆಗೆ ಬೆಲೆ 1,314.25 ರೂ.ಗಳಿಗೆ ತಲುಪಿತ್ತು.

ಷೇರು ಪೇಟೆಯ ಮೊದಲ ದಿನದ ಆರಂಭದಲ್ಲೇ ಬೆಲೆ 1,199.95 ರೂ.ಗಳಿಗೆ ತಲುಪಿತ್ತು. ಇದು ಆರಂಭಿಕ ಬೆಲೆಯ ಶೇ.139.99ರ ಹೆಚ್ಚಳವಾಗಿದೆ. ಒಂದು ಹಂತದಲ್ಲಿ ಶೇ.180ರಷ್ಟು ಹೆಚ್ಚಳವಾಗಿ 1,400 ರೂ.ಗಳವರೆಗೆ ತಲುಪಿತ್ತು. ದಿನದ ಅಂತ್ಯಕ್ಕೆ ಶೇ.162.85ರ ಹೆಚ್ಚಳವಾದ 1,314.25 ರೂ.ಗಳಲ್ಲಿ ಅಂತ್ಯಗೊಂಡಿತು.

ಕಂಪನಿಯ ಮಾರುಕಟ್ಟೆ ಮೌಲ್ಯ ಈಗ 53,314.99 ರೂ.ಗಳಿಗೆ ತಲುಪಿದೆ. ಟಾಟಾ ಷೇರುಗಳ ಆರಂಭಿಕ ಬಿಡುಗಡೆಯಲ್ಲೇ ಸಾಕಷ್ಟು ಬೇಡಿಕೆ ಕಂಡು ಬಂದಿತ್ತು.

ಎರಡು ದಶಕಗಳ ನಂತರ ಟಾಟಾ ಸಮೂಹದ ಕಂಪನಿಯೊಂದು ಸಾರ್ವಜನಿಕರಿಗೆ ಆರಂಭಿಕ ಷೇರುಗಳ ಮಾರಾಟ ಮಾಡಿತ್ತು. ಈ ಹಿಂದೆ 2004ರಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಐ.ಪಿ.ಒ. ಬಿಡುಗಡೆ ಮಾಡಿತ್ತು.

## ನಾಳೆ ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ



ದಾವಣಗೆರೆ, ನ.30- ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಕರ್ನಾಟಕ ಏಕೀಕರಣದ ಸೇನಾನಿಗಳೂ, ಅಖಿಲ ಭಾರತ ವೀರಶೈವ -ಲಿಂಗಾಯತ ಮಹಾಸಭಾದ ಗೌರವಾಧ್ಯಕ್ಷರೂ ಆಗಿರುವ ಭೀಮಣ್ಣ ಖಂಡ್ರೆ ಅವರ ಜನ್ಮಶತಮಾನೋತ್ಸವ ಮತ್ತು 'ಲೋಕನಾಯಕ' ಅಭಿನಂದನಾ ಗ್ರಂಥ ಲೋಕಾರ್ಪಣೆ ಸಮಾರಂಭ ಬರುವ ಡಿಸೆಂಬರ್ 2ರಂದು ಜರುಗಲಿದೆ. ಭೀಮಣ್ಣ ಖಂಡ್ರೆ ಜನ್ಮ ಶತಮಾನೋತ್ಸವ ಸಮಿತಿ, ಅಖಿಲ ಭಾರತ ವೀರಶೈವ -ಲಿಂಗಾಯತ ಮಹಾಸಭಾದ ಮತ್ತು ಶಾಂತಿವರ್ಧಕ ಶಿಕ್ಷಣ ಸಂಸ್ಥೆಗಳ ಸಹಕಾರದೊಂದಿಗೆ ಬೀದರ್ ಜಿಲ್ಲೆ ಬಾಲ್ಕಿಯ ಬಿಕೆಐಟಿ ಇಂಜಿನಿಯರಿಂಗ್ ಕಾಲೇಜ್ ಆವರಣದಲ್ಲಿ ಕಾರ್ಯಕ್ರಮ ಜರುಗಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ.

## ನಗರದಲ್ಲಿ ವಾಣಿಜ್ಯ ಪ್ರದರ್ಶನ

ದಾವಣಗೆರೆ, ನ.30- ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್, ವಾಣಿಜ್ಯ ವಿಭಾಗದಿಂದ ಕಾಲೇಜಿನಲ್ಲಿ ಬರುವ ಡಿಸೆಂಬರ್ ದಿನಾಂಕ 4ರ ಸೋಮವಾರದಂದು ಪಿಯುಸಿ ವಿದ್ಯಾರ್ಥಿಗಳಿಗಾಗಿ ವಿನೂತನವಾಗಿ ವಾಣಿಜ್ಯ ಪ್ರದರ್ಶನವನ್ನು ಆಯೋಜಿಸಲಾಗಿದೆ. ವಾಣಿಜ್ಯೋತ್ಸವ - 2023 ರ ಅಂಗವಾಗಿ ಮಾಡೆಲ್ ಪ್ರಸ್ತುತಿ, ಪೋಸ್ಟರ್ ಪ್ರಸ್ತುತಿ, ಮಾರ್ಕೆಟಿಂಗ್ ಸ್ಟೋರೀಸ್, ಕರೆನ್ಸಿ ಅಂಡ್ ಸ್ಟ್ಯಾಂಪ್ ಎಕ್ಸಿಬಿಷನ್, ಬ್ಯುಸಿನೆಸ್ ಐಡಿಯಾತನ್, ಬ್ಯುಸಿನೆಸ್ ಕ್ವಿಜ್ ಮತ್ತು ಸಂಸ್ಕೃತಿ ಕಲಾತ್ಮಕ ನೃತ್ಯ ಸ್ಪರ್ಧೆಗಳಿವೆ ಎಂದು ನಿರ್ದೇಶಕ ಡಾ.ಸ್ವಾಮಿ ತ್ರಿಭುವಾನಂದ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 77956 88146 , 95911 45793.

## ನಂದಗೋಕುಲ ಶಾಲೆಯಲ್ಲಿ ಅಗಲಿದ ವೀರ ಯೋಧನಿಗೆ ನಮನ



ದಾವಣಗೆರೆ, ನ. 30-ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ರಾಷ್ಟ್ರಪತಿ ಸ್ಕೌಟ್ ವಿದ್ಯಾರ್ಥಿ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ಹುತಾತ್ಮರಾಗಿದ್ದು, ಅಗಲಿದ ವೀರ ಯೋಧನಿಗೆ ಶ್ರೀಮಾತಾ ವಿದ್ಯಾಸಂಸ್ಥೆ ನಂದಗೋಕುಲ ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷ ವೈ.ಬಿ. ಸತೀಶ್, ಕಾರ್ಯದರ್ಶಿ ಶ್ರೀಮತಿ ಬಿ. ಅನುಸೂಯ, ಮುಖ್ಯ ಶಿಕ್ಷಕಿ ಶ್ರೀಮತಿ ರೆಹಾನಾ ಬಾನು ನಾಸಿಕ ಹಾಗೂ ಯುವ ಸಮಿತಿ ಅಧ್ಯಕ್ಷ ಮುಸ್ತಫಾ ರಜಾ, ಶಿಕ್ಷಕ ವೃಂದದವರು, ಸ್ಕೌಟ್, ಗೈಡ್, ಬುಲ್ ಬುಲ್ ಹಾಗೂ ಕಬ್ಸ್ ವಿದ್ಯಾರ್ಥಿಗಳು ನಮನ ಸಲ್ಲಿಸಿದರು.

## ಡಾ.ಪಿ.ಗೋಪಿಗೆ ಜಯಣ್ಣ ಚಿಗಟೇರಿ ಟ್ರಸ್ಟ್ ಪ್ರಶಸ್ತಿ



ದಾವಣಗೆರೆ, ನ. 30 - ದಾವಣಗೆರೆ ವಿಶ್ವ ವಿದ್ಯಾನಿಲಯ ಮತ್ತು ಚಿಗಟೇರಿ ಕುಟುಂಬದವರ ಪ್ರಾಯೋಜಕತ್ವದ ಜಯರತ್ನ ಕಲ್ಯಾಣ ಕೇಂದ್ರ ಟ್ರಸ್ಟ್ ವತಿಯಿಂದ ನಾಳೆ ಡಿಸೆಂಬರ್ 1ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ದಿ. ಜಯಣ್ಣ ಎಂ. ಚಿಗಟೇರಿ ಸ್ಮಾರಕ ದತ್ತಿ ಉಪನ್ಯಾಸ ಮತ್ತು ಮಾನವಿಕ ಅಧ್ಯಯನದ ಶ್ರೇಷ್ಠ ಸಂಶೋಧನೆಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಬಾಪೂಜಿ ಎಂಬಿಎ ಸಭಾಂಗಣದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಪ್ರೊ.ರವೀಂದ್ರ ರೇಷ್ಮೆ ದತ್ತಿ ಉಪನ್ಯಾಸ ನೀಡಲಿದ್ದಾರೆ. ಈ ಬಾರಿ ಸಂಶೋಧನೆಗೆ ದಾವಣಗೆರೆ ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನಾ ಪ್ರಬಂಧ ಮಂಡಿಸಿ, ಪಿಎಚ್.ಡಿ. ಪದವಿ ಪಡೆದ ಡಾ.ಎಚ್.ಗೋಪಿ ಅವರಿಗೆ 'ಜಯಣ್ಣ ಚಿಗಟೇರಿ ಅವಾರ್ಡ್ ಫಾರ್ ಹುಮ್ಯಾನಿಟೀಸ್ ಎಕ್ಸಲೆನ್ಸ್' ಪುರಸ್ಕಾರ ಪ್ರದಾನ ಮಾಡಲಾಗುತ್ತಿದೆ. ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು, ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೌಡ್ಸ್ ರಾಜ್ಯ ಉಪಾಧ್ಯಕ್ಷ ಕೊಂಡಜ್ಜಿ ಬಿ.ಷಣ್ಮುಖಪ್ಪ, ವಿಧಾನ ಪರಿಷತ್ ಸದಸ್ಯ ನವೀನ್ ಕೊಟ್ಟಿಗೆ, ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಉಪಾಧ್ಯಕ್ಷ ಡಾ.ಅಥಣಿ ವೀರಣ್ಣ ಅವರು ಅತಿಥಿಗಳಾಗಿ ಆಗಮಿಸಲಿದ್ದಾರೆ. ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಸಚಿವೆ ಬಿ.ಬಿ. ಸರೋಜ ಮತ್ತು ಜಯರತ್ನ ಕಲ್ಯಾಣ ಕೇಂದ್ರ ಟ್ರಸ್ಟ್ ಸಂಯೋಜಕ ಡಾ.ಚಿನ್ಮಯ ಪಿ.ಚಿಗಟೇರಿ ತಿಳಿಸಿದ್ದಾರೆ.

## ಸೆಪ್ಟೆಂಬರ್ ಚತುರ್ಥದಲ್ಲಿ ಜಿಡಿಪಿ ಬೆಳವಣಿಗೆ ಶೇ.7.6

ನವದೆಹಲಿ, ನ. 30 – ಸೆಪ್ಟೆಂಬರ್ ಚತುರ್ಥದಲ್ಲಿ ದೇಶದ ಜಿ.ಡಿ.ಪಿ. ಬೆಳವಣಿಗೆ ದರ ಶೇ.7.6ರಷ್ಟಿದೆ. ಪ್ರಮುಖ ಆರ್ಥಿಕ ವಲಯಗಳಲ್ಲಿ ಭಾರತ ಅತಿ ಹೆಚ್ಚಿನ ಬೆಳವಣಿಗೆ ಕಂಡಿದೆ.

ಉತ್ಪಾದನಾ ವಲಯ, ಗಣಿಗಾರಿಕೆ ಹಾಗೂ ಸೇವಾ ವಲಯದಲ್ಲಿ ಆಗಿರುವ ಬೆಳವಣಿಗೆಯೇ ಇದಕ್ಕೆ ಕಾರಣವಾಗಿದೆ. ಕಳೆದ ವರ್ಷ ಸೆಪ್ಟೆಂಬರ್ ಚತುರ್ಥದಲ್ಲಿ ಶೇ.6.2ರ ಬೆಳವಣಿಗೆಯಾಗಿತ್ತು.


**ಜನ್ಮ ದಿನದ ಶುಭಾಶಯಗಳು**



**ಶ್ರೀ ಗುಡ್ಡಣ್ಣನವರ ಶಿವಶಂಕರಪ್ಪ**
ಜಮೀನ್ದಾರರು, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಕಾರ್ಯಕರ್ತರು, ಖಡಕ್ ಷಾವಲಿ ದರ್ಗಾದ ಖಜಾಂಚಿಗಳು, ದಾವಣಗೆರೆ ಇವರ 70ನೇ ಹುಟ್ಟುಹಬ್ಬಕ್ಕೆ ಶುಭ ಕೋರುವವರು :

- ✦ **ಡಾ. ಶಾಮನೂರು ಶಿವಶಂಕರಪ್ಪ,** ಶಾಸಕರು, ಗೌರವಾಧ್ಯಕ್ಷರು,
- ✦ **ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ,** ಉಪಾಧ್ಯಕ್ಷರು,
- ✦ **ಶ್ರೀ ಯಜಮಾನ್ ಮೋತಿ ವೀರಣ್ಣ,** ಧರ್ಮದರ್ಶಿಗಳು, ಮಾಜಿ ಶಾಸಕರು
- ✦ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್,** ಕಾರ್ಯಾಧ್ಯಕ್ಷರು, ಸಚಿವರು
- ✦ **ಶ್ರೀ ಗೌಡ್ರು ಚನ್ನಬಸಪ್ಪನವರು**
- ✦ **ಹಾಗೂ ರೈತರು, ಬಣಕಾರರು, ಜಮೀನ್ದಾರರು, ಬಂಧು-ಮಿತ್ರರು.**


## ವಿಜ್ಞಾನ, ತಂತ್ರಜ್ಞಾನ ಅಕಾಡೆಮಿಯಿಂದ ರಾಷ್ಟ್ರೀಯ ಕಾರ್ಯಾಗಾರ

ದಾವಣಗೆರೆ, ನ. 30 - ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವತಿಯಿಂದ ಡಿಸೆಂಬರ್ 6 ರಿಂದ 8ರ ವರೆಗೆ ಬೆಂಗಳೂರಿನ ವಿದ್ಯಾರಣ್ಯ ಪುರದಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಜಿ.ಕೆ.ವಿ.ಕೆ ಆವರಣದಲ್ಲಿ ಬೇಸಿಕ್ಸ್ ಅಂಡ್ ರಿಯಲ್-ವರ್ಡ್ ಅಪ್ಲಿಕೇಶನ್ಸ್ ಆಫ್ ಯುಎವಿ ಅಂಡ್ ಡ್ರೋನ್ಸ್ ವಿಷಯ ಕುರಿತು ರಾಷ್ಟ್ರೀಯ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಾಗಾರದಲ್ಲಿ 35 ವರ್ಷ ಮೀರದ ಪದವಿ, ಸ್ನಾತಕೋತ್ತರ, ಡಿಪ್ಲೋಮಾ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಡಿಸೆಂಬರ್ 2 ರೊಳಗಾಗಿ ವೆಬ್‌ಸೈಟ್ https://forms.gle/fBWXpnoczCT-d3ZDFA ನಲ್ಲಿ ಭರ್ತಿ ಮಾಡಿ ನೋಂದಾಯಿಸಿಕೊಳ್ಳಬೇಕು.

ವಿವರಗಳಿಗೆ ವೈಜ್ಞಾನಿಕ ಅಧಿಕಾರಿ (ಮೊ: 9743084194) ಅಥವಾ ಅಕಾಡೆಮಿಯ ವೆಬ್ ಸೈಟ್ www.kstacademy.in ಸಂಪರ್ಕಿಸಲು ಅಕಾಡೆಮಿ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ ರಮೇಶ್ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ಕಾರ್ತಿಕ

ಸಂಗಮ ಟಾಕೀಸ್ ಹಿಂದುಗಡೆ ಶ್ರೀ ರಂಗನಾಥ ನಗರ ರಸ್ತೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಸ್ಥಾನದ ಕಾರ್ತಿಕೋತ್ಸವ ಇಂದು ನಡೆಯಲಿದೆ. ಸಂಜೆ 5.30 ಕ್ಕೆ ಶ್ರೀ ಮಹಾಲಕ್ಷ್ಮಿ ದೇವಿಯ ಉತ್ಸವ ಮೂರ್ತಿ ಹಾಗೂ ಬಣಗಾರ ಸಮಾಜದ ಆದಿಗುರು ಶ್ರೀ ಶಂಕರ ದಾಸಿಮಯ್ಯನವರ ಭಾವಚಿತ್ರದ ಪಾಲಕಿ ಉತ್ಸವ ಜರುಗುವುದು. ಸಂಜೆ 7 ಕ್ಕೆ ಮಹಾಲಕ್ಷ್ಮಿ ದೇವಿಯ ಕಾರ್ತಿಕ ದೀಪೋತ್ಸವ ಹಾಗೂ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 7 ರವರೆಗೆ ಆಲೂರು ಕನ್‌ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ. ಮಾನಸಿಕ ಹಾಗೂ ದೈಹಿಕವಾಗಿ ಮನುಷ್ಯನ ಅಂತರಂಗ ಮತ್ತು ಬಹಿರಂಗ ಧ್ಯಾನ ಸಾಧನೆಗಾಗಿ ಓಶೋರು ನಿರೂಪಿಸಿರುವ ಚಿಕಿತ್ಸಕ ವಿಶಿಷ್ಟ ಓಶೋ ಧ್ಯಾನ ಶಿಬಿರ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : ಪುಷ್ಪ (9036719573) ಅರ್ಚನ (9738572311).

## ಕಲಬೆರಕೆ ಆಯುರ್ವೇದ ಔಷಧ ಸೇವಿಸಿ ಐವರ ಸಾವು

ನದಿಯಾಡ್, ನ. 30 - ಮಿಥೈಲ್ ಆಲ್ಕೋಹಾಲ್ ಇದ್ದ ಕಲಬೆರಕೆ ಆಯುರ್ವೇದ ಔಷಧ ಸೇವಿಸಿದ ಐವರು ಸಾವನ್ನಪ್ಪಿದ ಘಟನೆ ಗುಜರಾತ್‌ನ ಖೇಡ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. 'ಕಲ್ಮೆಘಸವ್ - ಅಸವ ಅರಿಷ್ಟ' ಎಂಬ ಹೆಸರಿನ ಆಯುರ್ವೇದ ಔಷಧಿಯನ್ನು ನದಿಯಾಡ್ ನಗರದ ಬಳಿಯ ಬಿಲೊಡಾರಾ ಹಳ್ಳಿಯಲ್ಲಿ ಸುಮಾರು 50 ಜನರಿಗೆ ಮಾರಲಾಗಿತ್ತು. ಮಾರಲಾದ ಈ ಔಷಧದಲ್ಲಿ ವಿಷಕಾರಿಯಾದ ಮಿಥೈಲ್ ಆಲ್ಕೋಹಾಲ್ ಇದ್ದದ್ದು ಗ್ರಾಮಸ್ಥರೊಬ್ಬರ ರಕ್ತ ತಪಾಸಣೆಯಿಂದ ಪತ್ತೆಯಾಗಿದೆ ಎಂದು ಖೇಡಾದ ಎಸ್ಪಿ ರಾಜೇಶ್ ಗಢಿಯ ಹೇಳಿದ್ದಾರೆ. ಔಷಧ ಸೇವಿಸಿದ ಐವರು ಕಳೆದ ಎರಡು ದಿನಗಳಲ್ಲಿ ಸಾವನ್ನಪ್ಪಿದ್ದಾರೆ ಹಾಗೂ ಇಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಅಂಗಡಿಯಾತ ಸೇರಿದಂತೆ ಮೂವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ಒಳಪಡಿಸಲಾಗಿದೆ ಎಂದವರು ತಿಳಿಸಿದ್ದಾರೆ.


**ನೂತನ ಶಾಖೆ**

ದಾವಣಗೆರೆಯಲ್ಲಿ ಜನಪ್ರಿಯತೆ ಹೊಂದಿದ
**ಅನ್ವಯ ಆಯುರ್ವೇದ ಆಸ್ಪತ್ರೆಯ**
**ಅನ್ವಯ ಆಯುರ್ವೇದ ಚಿಕಿತ್ಸಾಲಯ ಮತ್ತು ಪಂಚಕರ್ಮ ತರಬೇತಿ ಕೇಂದ್ರ**
#1288, ಹಂಜಿ ನಿಲಯ, 8 ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.
☎ : 6364321664, 08192-452312

**ಲಭ್ಯವಿರುವ ಸೌಲಭ್ಯಗಳು :**
- ✦ ಸುಸಜ್ಜಿತವಾದ ಹೊರ ರೋಗಿಗಳ ವಿಭಾಗ
- ✦ ಎಲ್ಲಾ ರೀತಿಯ ಪಂಚಕರ್ಮ ಚಿಕಿತ್ಸೆ (ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕ)
- ✦ ಆಯುರ್ವೇದ ಔಷಧಾಲಯ ✦ ಅಭ್ಯಂಗ ಮತ್ತು ಸ್ವೇದ (ಮಸಾಜ್ ಚಿಕಿತ್ಸೆ)
- ✦ ಲೀಚ್ ಚಿಕಿತ್ಸೆ(ದುಷ್ಟ ರಕ್ತದ ಚಿಕಿತ್ಸೆ) ✦ ಅಕ್ಯುಪಂಕ್ಚರ್ ಚಿಕಿತ್ಸೆ
- ✦ ನಕ್ಷತ್ರ ಚಿಕಿತ್ಸೆ (ಮೃಗಶಿರ ಮತ್ತು ಆಟೀ ಅಮಾವಾಸ್ಯೆಯಂದು ಔಷಧಿ ವಿತರಣೆ)
- ✦ ಪ್ರತಿ ತಿಂಗಳು ಸ್ವರ್ಣಬಿಂಧು ಪ್ರಾಶನ (ಪುಷ್ಯ ನಕ್ಷತ್ರದಂದು)
- ✦ ಗರ್ಭಿಣಿ ಮತ್ತು ಸೂತಿಕ ಆರೈಕೆ ✦ ಹಲವು ರೋಗಗಳಿಗೆ ಸಲಹೆ ಮತ್ತು ಶಾಸ್ತ್ರೋಕ್ತ ಚಿಕಿತ್ಸೆ
- ✦ ಪಂಚಕರ್ಮ ತರಬೇತಿ ಕೇಂದ್ರ (Panchakarma therapist course)


# ಮನುಷ್ಯ ನಿರ್ಬಂಧ ವಿಧಿಸಿಕೊಂಡಾಗ ಮನಸ್ಸು ಜಾಗೃತವಾಗುತ್ತದೆ

### ವಾಸನ : ಸಾಮೂಹಿಕ ಸತ್ಯನಾರಾಯಣ ಪೂಜೆ, ಧಾರ್ಮಿಕ ಸಭೆಯಲ್ಲಿ ಶಿವಲಿಂಗ ಶಿವಾಚಾರ್ಯ ಶ್ರೀ

ಮಲೇಬೆನ್ನೂರು, ನ.30- ಮನುಷ್ಯ ನಿರ್ಬಂಧ ವಿಧಿಸಿಕೊಂಡಾಗ ಮಾತ್ರ ಮನಸ್ಸು ಜಾಗೃತವಾಗುತ್ತದೆ ಎಂದು ರಟ್ಟಿಹಳ್ಳಿ ಕಬ್ಬಿಣಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ವಾಸನ ಗ್ರಾಮದ ಮಾರ್ಕಂಡೇಶ್ವರ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮೊನ್ನೆ ಹಮ್ಮಿಕೊಂಡಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಹಾಗೂ ಧಾರ್ಮಿಕ ಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.



ಶರೀರ ಉತ್ತಮವಾಗಿರಲು ಸೇವೆ ಮಾಡಬೇಕು. ಸಮಾಜದಲ್ಲಿ ನಿರುಪಯುಕ್ತ ವಸ್ತು ಯಾವುದೂ ಇಲ್ಲ. ಒಂದು ಕಡ್ಡಿಯೂ ಉಪಯೋಗಕ್ಕೆ ಬರುತ್ತದೆ, ಕಷ್ಟದ ಮಹಿಳೆಯರಿಗೆ ಸ್ವಾವಲಂಬಿ ಜೀವನ ನಡೆಸಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉತ್ತಮ ವರವಾಗಿದ್ದು, ಆಧ್ಯಾತ್ಮ ಬದುಕನ್ನು ತೋರಿಸಿದೆ. ಲೌಕಿಕ ಜೀವನ ಪರಿಶುದ್ಧ ಕಾಯಕ ತಿಳಿಸಿದರೆ, ಅಧ್ಯಾತ್ಮದ ಬದುಕು ಶಾಂತಿ, ನೆಮ್ಮದಿ ತೋರಿಸುತ್ತದೆ ಎಂದು ಗಾಂಧೀಜಿ ಮತ್ತು ರವೀಂದ್ರ ನಾಥ ಠ್ಯಾಗೋರ್ ಅವರ ಮಿತ ಆಹಾರ, ಸರಳ ಜೀವನ ಮತ್ತು ವ್ರತಾಚರಣೆ ಮಾಡಿದ ಬಗ್ಗೆ ವಿವರಿಸಿದರು.

ಪ್ರವಚನಕಾರ ಹೊಳೆಸಿರಿಗೆರೆಯ ಡಿ.ಕೆ ಸಿದ್ದೇಶ್ ಮಾತನಾಡಿ, ಅಂತರಂಗ ಶುದ್ಧವಾದಲ್ಲಿ ಭಗವಂತ ಬರುತ್ತಾನೆ. ಧರ್ಮಕಾರ್ಯಗಳು ಭವಿಷ್ಯ ದಲ್ಲಿ ಕಾಪಾಡುತ್ತವೆ. ಕಷ್ಟ ಪಟ್ಟಾಗ ದೊಡ್ಡವರಾಗ ಬಹುದು. ಕಷ್ಟಬಂದಾಗ ಪರಮಾತ್ಮನನ್ನು ಸ್ಮರಿಸುವುದಲ್ಲ, ಪೂಜೆಯಲ್ಲಿ ಬಳಸುವ ಪತ್ರೆ, ಹೂವು, ನೀರು, ತೆಂಗಿನಕಾಯಿ ಬಳಕೆಗೂ ಒಂದು ಇತಿಹಾಸ-ವಿಜ್ಞಾನ ಇದೆ. ಶಂಖ ಮತ್ತು ಗಂಟೆಗೆ ದುಷ್ಟ ಶಕ್ತಿಯನ್ನು ಓಡಿಸುವ ಶಕ್ತಿ ಇದೆ ಎಂದರು.

ಪ್ರಾಣಿ, ಪಕ್ಷಿಗಳಿಗೆ ಯಾವುದೇ ಆಸೆಗಳಿಲ್ಲ, ಮನುಷ್ಯನಿಗೆ ಬಯಕೆಗಳು ಅನೇಕ ಇದ್ದು ತೃಪ್ತಿ ಅಸಾಧ್ಯವಾಗಿದೆ ಎಂದರು.

ಗ್ರಾ.ಪಂ. ಅಧ್ಯಕ್ಷ ರುದ್ರಗೌಡ, ಉಪಾಧ್ಯಕ್ಷೆ ನಾಗಮ್ಮ, ಸದಸ್ಯೆ ಮಂಜುಳಾ, ಕೆಂಚವೀರಯ್ಯ, ರುದ್ರಪ್ಪ, ಸತೀಶ್, ತಿಮ್ಮಪ್ಪ, ಮಂಜಪ್ಪ, ಕಲಾವಿದ ಮಹಂತೇಶ್, ದಾಸರ ರಾಮಪ್ಪ, ಚಂದ್ರಪ್ಪ, ಸಾರಥಿ ಚಂದ್ರಪ್ಪ, ಎಸ್.ಕೆ. ಮಹಂತೇಶಪ್ಪ, ಮಂಜನಾಥ್, ಗದ್ದಿಗೇಶ್, ಮಲೇಬೆನ್ನೂರು ಯೋಜನಾಧಿ ಕಾರಿ ವಸಂತ್ ದೇವಾಡಿಗ, ಸಂಪನ್ಮೂಲ ವ್ಯಕ್ತಿಗಳಾದ ಸದಾನಂದ, ಮಲ್ಲಿಕಾರ್ಜುನ್, ಅನಂತ್‌ಕುಮಾರ್, ಹಾಲಸ್ವಾಮಿ, ಕೊಕ್ಕನೂರು ವಲಯ ಮೇಲ್ವಿಚಾರಕರಾದ ರಂಜಿತಾ, ಹೊಳೆಸಿರಿಗೆರೆ ವಲಯ ಮೇಲ್ವಿಚಾರಕ ರಂಗಸ್ವಾಮಿ, ಕೃಷಿ ಅಧಿಕಾರಿ ಗಂಗಾಧರ, ಸೇವಾ ಪ್ರತಿನಿಧಿಗಳಾದ ಯಶೋಧ, ರಾಮಚಂದ್ರಪ್ಪ, ಕೊಟ್ರೇಶ್, ರೂಪಾ, ಚಂದ್ರಮ್ಮ, ವೀಣಾ, ವಾಣಿ ಮತ್ತು ಇತರರು ಭಾಗವಹಿಸಿದ್ದರು.


**ಬೇಕಾಗಿದ್ದಾರೆ**

**SALES EXECUTIVE**

**Qualification :**
Diploma Automobile / Mechanical or Any Degree with 2-3 year experience

EICHER

**ವಿಜಯ ಆಟೋ ಸೇಲ್ಸ್ & ಸರ್ವೀಸ್ ದಾವಣಗೆರೆ**
ಹೊಸ ಜಿಲ್ಲಾಡಳಿತ ಭವನದ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.

Dealer for Eicher Trucks & Buses
**Contact :**
94480 70098, 99721 48455

# ಸುರಂಗದ ಕಾರ್ಮಿಕರಿಗೆ ಅನಿಶ್ಚಿತತೆ

ಉತ್ತರಕಾಶಿ, ನ. 30 - ಸಿಲ್ಕ್ಯಾರಾ ಸುರಂಗದಿಂದ ಹೊರ ಬಂದ ಕಾರ್ಮಿಕರೀಗ ಕೆಲಸದಲ್ಲಿ ಮುಂದುವರಿಯಬೇಕೇ ಅಥವಾ ವಾಪಸ್ ಮನೆಗೆ ಹೋಗಬೇಕೇ ಎಂಬ ಗೊಂದಲದಲ್ಲಿ ಸಿಲುಕಿದ್ದಾರೆ.

ಸುರಂಗದಲ್ಲಿ ಸಿಲುಕಿದ್ದ 41 ಕಾರ್ಮಿಕರನ್ನು 17 ದಿನಗಳ ಕಾಲದ ಸುದೀರ್ಘ ಕಾರ್ಯಾಚರಣೆ ನಂತರ ಹೊರ ತರಲಾಗಿತ್ತು.



**ಕೆಲಸದಲ್ಲಿ ಮುಂದುವರೆಯುವ ಬಗ್ಗೆ ಇನ್ನೂ ನಿರ್ಧಾರವಿಲ್ಲ**

ನಾನು ಮನೆಗೆ ವಾಪಸ್ಸಾಗಲು ರಜೆ ಅರ್ಜಿ ಸಲ್ಲಿಸಿದ್ದೇನೆ. ಕಾಮಗಾರಿ ಯಾವಾಗ ಪುನರಾರಂಭವಾಗಲಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಬಿಹಾರದ ಯಂತ್ರ ನಿರ್ವಾಹಕರೊಬ್ಬರು ಹೇಳಿದ್ದಾರೆ.

ಇಲ್ಲಿನ ಕೆಲಸದ ಪರಿಸ್ಥಿತಿ ಅಪಾಯಕಾರಿಯಾಗಿದೆ. ಮನೆಗೆ ವಾಪಸ್ಸಾಗುವಂತೆ ತಾಯಿ ಒತ್ತಡ ಹೇರಿದ್ದಾಳೆ ಎಂದು ಇನ್ನೊಬ್ಬರು ಹೇಳಿದ್ದಾರೆ.

ಸುರಕ್ಷತಾ ವರದಿ ಪಡೆದ ನಂತರವೇ ಕಾಮಗಾರಿ ಪುನರಾರಂಭವಾಗಲಿದೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಮಿಕರ ರಕ್ಷಣೆಗಾಗಿ ಬೆಟ್ಟದ ಮೇಲಿನ 45 ಮೀಟರ್‌ಗಳ ಸುರಂಗ ತೋಡಲಾಗಿತ್ತು. ಸುರಂಗದ ಒಳಗಿನ ಅವಶೇಷಗಳನ್ನು ಇನ್ನೂ ತೆರವುಗೊಳಿಸಬೇಕಿದೆ.

ಯಮುನೋತ್ರಿ ಹಾಗೂ ಗಂಗೋತ್ರಿ ನಡುವಿನ ಅಂತರವನ್ನು 28 ಕಿ.ಮೀ.ಗಳಿಂದ 4.5 ಕಿ.ಮೀ.ಗಳಿಗೆ ಇಳಿಸಲು ಈ ಹೆದ್ದಾರಿ ನಿರ್ಮಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮವು ಈ ಕಾಮಗಾರಿ ಕೈಗೊಂಡಿದೆ. ನಾಲ್ಕು ವರ್ಷಗಳಿಂದ ಸುರಂಗ ಕಾಮಗಾರಿ ನಡೆಯುತ್ತಿದೆ.

ನಾವು ಒಂದೆರಡು ದಿನಗಳ ವಿಶ್ರಾಂತಿ ಕೇಳಿದ್ದೇವೆ. ಆದರೆ, ರಜೆಯನ್ನು ಇನ್ನಷ್ಟು ದಿನ ವಿಸ್ತರಿಸಲು ಯೋಜಿಸಿದ್ದೇವೆ ಎಂದು ಉತ್ತರ ಪ್ರದೇಶದ ಇನ್ನೊಬ್ಬ ಕಾರ್ಮಿಕ ಹೇಳಿದ್ದಾರೆ.

ಸುರಂಗದಿಂದ 200 ಮೀಟರ್ ದೂರದ ತಾಣದಲ್ಲಿ ಕಾರ್ಮಿಕರಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ.

ಜಾರ್ಖಂಡ್‌ನ ಇನ್ನೋರ್ವ ಕಾರ್ಮಿಕ ಸಹ ಮನೆಗೆ ವಾಪಸ್ಸಾಗಲು ಬಯಸಿದ್ದು, ಹದಿನೈದು ಸಹೋದ್ಯೋಗಿಗಳ ಪೈಕಿ ನಾಲ್ವರು ಈಗಾಗಲೇ ಮನೆಗೆ ಮರಳಿದ್ದಾರೆ ಎಂದು ಹೇಳಿದ್ದಾರೆ.

# ಈ ವರ್ಷ 188 ಇಂದಿರಾ ಕ್ಯಾಂಟೀನ್ : ಸಿಎಂ



ಬೆಂಗಳೂರು, ನ. 30 - ಜನರ ಅನುಕೂಲಕ್ಕಾಗಿ ಈ ವರ್ಷ ಹೆಚ್ಚುವರಿಯಾಗಿ 188 ಇಂದಿರಾ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅವರು ಇಂದು ಶಾಸಕರ ಭವನದ ಆವ ರಣದಲ್ಲಿ ಸಂತ ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು. ರಾಜಧಾನಿಯ 225 ವಾರ್ಡ್‌ಗಳಲ್ಲಿಯೂ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ಇದಲ್ಲದೇ ಅಗತ್ಯವಿ ರುವೆಡೆ ಕ್ಯಾಂಟೀನ್ ಪ್ರಾರಂಭಿಸಲಾಗುವುದು. ಇಂದಿರಾ ಕ್ಯಾಂಟೀನ್‌ಗೆ ಸ್ಥಳದ ಅಭಾವವಿರುವ ಕಡೆ ಮೊಬೈಲ್ ಕ್ಯಾಂಟೀನ್‌ಗಳನ್ನು ಸ್ಥಾಪಿಸಲಾಗುವುದು ಎಂದರು.

# ಕನ್ನಡ ಉಳಿಸಿ, ಅನ್ಯ ಭಾಷೆಗಳನ್ನೂ ಗೌರವಿಸಬೇಕು

## ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ

ದಾವಣಗೆರೆ, ನ.30- ಕನ್ನಡವನ್ನೇ ಮಾತನಾಡುವ ಮೂಲಕ ಕನ್ನಡವನ್ನು ಉಳಿಸಿ, ಬೆಳೆಸೋಣ. ಜೊತೆಗೆ ಅನ್ಯ ಭಾಷೆಗಳನ್ನೂ ಗೌರವಿಸೋಣ ಎಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಹೇಳಿದರು.



ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ವೇದಿಕೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾರಾದರೂ ನಮ್ಮನ್ನು ಮಾತನಾಡಿಸಿದರೆ ಇಂಗ್ಲೀಷ್‌ನಲ್ಲಿ ಉತ್ತರಿಸುವುದನ್ನು ಕಡಿಮೆ ಮಾಡಿ, ಆದಷ್ಟೂ ಕನ್ನಡವನ್ನೇ ಮಾತನಾಡುವ ಮೂಲಕ ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಬಹುದು. ಉದ್ಯೋಗ, ಆದಾಯ ಗಳಿಕೆ ಮತ್ತಿತರೆ ಕಾರಣಕ್ಕಾಗಿ ಅನ್ಯ ಭಾಷೆಗಳ ಜ್ಞಾನವೂ ಬೇಕಾಗುತ್ತದೆ. ಅವುಗಳನ್ನೂ ಗೌರವಿಸೋಣ. ಆದರೆ ಕನ್ನಡಕ್ಕೆ ಆದ್ಯತೆ ನೀಡೋಣ ಎಂದರು.

ಆಲೂರು ವೆಂಕಟರಾಯರು ಸೇರಿದಂತೆ ಹಲವರು ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ್ದರು. ಅದರ ಫಲವಾಗಿ 1973ರಲ್ಲಿ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ಇಂದು ಆ ಎಲ್ಲಾ ಹೋರಾಟಗಳನ್ನು ನೆನಪಿಸಿಕೊಳ್ಳಬೇಕಿದೆ ಎಂದು ಹೇಳಿದರು.

ನ್ಯಾಯಾಲಯದ ತೀರ್ಪುಗಳನ್ನು ಆಯಾ ಪ್ರಾಂತೀಯ ಭಾಷೆಗಳಲ್ಲಿಯೇ ನೀಡುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ನಮ್ಮ ರಾಜ್ಯದಲ್ಲಿ ತೀರ್ಪುಗಳನ್ನು ಕನ್ನಡದಲ್ಲಿಯೇ ಅನುವಾದ ಮಾಡಲಾಗುತ್ತಿದೆ. ಇದರಿಂದಾಗಿ ಜನ ಸಾಮಾನ್ಯರಿಗೆ ತೀರ್ಪಿನ ಬಗ್ಗೆ ತಿಳಿಯಲು, ಮನದಟ್ಟು ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದರು.

**ಕನ್ನಡ ಧ್ವಜಕ್ಕೆ ಮಾನ್ಯತೆ ಸಿಗಲಿ:** ಹಳದಿ ಹಾಗೂ ಕೆಂಪು ಬಣ್ಣ ಮಂಗಳಕರವಾದದ್ದು. ನಾವು ಮನೆಯಲ್ಲಿ ಅರಿಷಿಣ ಹಾಗೂ ಕುಂಕುಮವನ್ನು ಇದೇ ಕಾರಣಕ್ಕಾಗಿಯೇ ಬಳಸುತ್ತಿವೆ. ನಮ್ಮನಾಡಿನ ಧ್ವಜ ಈ ಬಣ್ಣಗಳನ್ನೊಳಗೊಂಡಿದೆ. ಕನ್ನಡ ಧ್ವಜಕ್ಕೆ ಮಾನ್ಯತೆ ನೀಡುವಂತೆ ಹೋರಾಟ ನಡೆಯುತ್ತಿದ್ದು, ಶೀಘ್ರ ಮಾನ್ಯತೆ ಸಿಗಲಿ ಎಂದು ಆಶಿಸಿದರು.

**ಕಾನೂನು ಪಾಲಿಸಿ:** ತಪ್ಪು ಎಂದು ತಿಳಿದಿದ್ದರೂ ಸಂಚಾರಿ ನಿಯಮಗಳ ಉಲ್ಲಂಘನೆ ಹೆಚ್ಚಾಗುತ್ತಿದೆ. ಹೆಲ್ಮೆಟ್ ಇಲ್ಲದೇ ವಾಹನ ಓಡಿಸುವುದು, ಒಂದೇ ಬೈಕ್‌ನಲ್ಲಿ ನಾಲ್ಕೈದು ಜನರು ಸವಾರಿ ಮಾಡುವುದನ್ನು ಕಾಣುತ್ತಿದ್ದೇವೆ. ಇದರಿಂದ ಅಪಘಾತಗಳಾಗುತ್ತವೆ. ಬಾಲ್ಯ ವಿವಾಹ ನಿಷೇಧವಿದ್ದರೂ ವಿವಾಹಗಳು ನಡೆಯುತ್ತಿವೆ. ಎಲ್ಲರ ಒಳಿತಿಗಾಗಿಯೇ ಕಾನೂನು ರೂಪಿಸಲಾಗಿರುತ್ತದೆ. ಪ್ರತಿಯೊಬ್ಬರೂ ಕಾನೂನು ಪಾಲನೆ ಮಾಡುವ ಮೂಲಕ ಗೌರವಿಸಬೇಕು ಎಂದು ಹೇಳಿದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಜಿ.ಸಲಗೆರೆ ಮಾತನಾಡಿ, ಕಾನೂನಿನ ಅರಿವು ಎಲ್ಲರಿಗೂ ಅಗತ್ಯ. ನಮ್ಮ ವರ್ತನೆಯಿಂದ ಇತರರ ಹಕ್ಕುಗಳು ಉಲ್ಲಂಘನೆ ಆಗಬಾರದು. ಗ್ರಾಮೀಣ ಪ್ರದೇಶದ ಜನರಿಗೆ ಕಾನೂನಿನ ಅರಿವು ಕಡಿಮೆ ಇದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರ ರಾಷ್ಟ್ರ, ರಾಜ್ಯ, ಜಿಲ್ಲಾ, ತಾಲ್ಲೂಕು ಮಟ್ಟದಲ್ಲಿ ಕಾನೂನು ಸೇವಾ ಪ್ರಾಧಿಕಾರ ಮಾಡಲಾಗಿದೆ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ.ಕರೆಣ್ಣವರ ಮಾತನಾಡಿ, ಭಾವೈಕ್ಯತೆ, ಅಭಿಮಾನ, ಪ್ರೀತಿ ನಮ್ಮಲ್ಲಿ ಇರಬೇಕು. ಅಲ್ಲದೇ ನಾಡು ನುಡಿಯ ರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣಕುಮಾರ್, ವೇದಿಕೆಯ ರಾಜ್ಯಾಧ್ಯಕ್ಷ ನಿಂಗರಾಜ ಗೌಡ್ರು, ಹೆಚ್.ಬಸವರಾಜ ಗೌಡ್ರು, ಆರ್.ಭಾಗ್ಯಲಕ್ಷ್ಮಿ, ಡಾ.ಮುರುಳೀಧರ್, ಸಂತೋಷ್ ಗೌಡ, ಸುರೇಶ್ ಗೌಡ, ಎ.ಎಸ್. ಸುವರ್ಣಮ್ಮ, ಸಂತೋಷ್ ಕುಮಾರ್, ಪರಶುರಾಮ್ ಬೇತೂರು, ಬಿ.ಜಯಪ್ರಕಾಶ್, ಅನುರಾಧ ಇತರರು ವೇದಿಕೆ ಮೇಲಿದ್ದರು.

# ಜೂಡೋ : ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಗತಿಗೆ ಗೋಲ್ಡ್, ರಂಜಿತಗೆ ಸಿಲ್ವರ್





ಹರಪನಹಳ್ಳಿ, ನ.30- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಈಚೆಗೆ ರಾಮನಗರದಲ್ಲಿ ನಡೆದ ಜೂಡೊ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಗೋಲ್ಡ್ ಹಾಗೂ ಸಿಲವರ್ ಮೆಡಲ್ ಗಳಿಸಿದ್ದಾರೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸ.ಪ.ಪೂ ಕಾಲೇಜಿನ ಪ್ರಾಚಾರ್ಯ ಸಿ.ಬಿ.ವೆಂಕಟೇಶ ಅವರು, ಪ್ರಥಮ ಪಿ.ಯು ಶಿಕ್ಷಣ ವಿಭಾಗದಲ್ಲಿ ಅಭ್ಯಾಸ ಮಾಡುತ್ತಿರುವ ಚೆನ್ನಹಳ್ಳಿ ತಾಂಡಾದ ಪ್ರಗತಿ ಎಂಬ ವಿದ್ಯಾರ್ಥಿನಿ 52 ಕಿಲೋ ವಿಭಾಗದ ಜೂಡೊ ಸ್ಪರ್ಧೆಯಲ್ಲಿ ಗೋಲ್ಡ್ ಮೆಡಲ್ ಪಡೆದಿದ್ದಾಳೆ.

ಪ್ರಥಮ ವರ್ಷದ ಶಿಕ್ಷಣ ವಿಭಾಗದ ಇನ್ನೊಬ್ಬ ವಿದ್ಯಾರ್ಥಿನಿ ತಾಲ್ಲೂಕಿನ ಹುಲ್ಲಿಕಟ್ಟಿ ಗ್ರಾಮದ ಎಂ.ರಂಜಿತ 63 ಕಿಲೋ ವಿಭಾಗದ ಜೋಡೋ ಸ್ಪರ್ಧೆಯಲ್ಲಿ ಸಿಲವರ್ ಮೆಡಲ್ ಗಳಿಸಿದ್ದಾಳೆ.

ಈ ಸಂದರ್ಭದಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಇಸ್ಮಾಯಿಲ್ ಎಲಿಗಾರ, ಸದಸ್ಯರಾದ ಉಮಾ ಮಹೇಶ್, ವೆಂಕಟೇಶ್ ಹಾಜರಿದ್ದು ವಿದ್ಯಾರ್ಥಿನಿಯರಿಗೆ ಅಭಿನಂದಿಸಿದರು.

# ಕನಕದಾಸರ ಸಾಮಾಜಿಕ ಚಿಂತನೆ ಜೀವನಕ್ಕೆ ಆದರ್ಶ

## ಜಿಲ್ಲಾ ಕಾಂಗ್ರೆಸ್‌ನಿಂದ ಕನಕದಾಸರ ಜಯಂತ್ಯೋತ್ಸವದಲ್ಲಿ ಶಾಸಕ ಎಸ್ಸೆಸ್



ದಾವಣಗೆರೆ, ನ.30- 16ನೇ ಶತಮಾನದಲ್ಲಿನ ಕನಕದಾಸರ ಸಾಮಾಜಿಕ ಚಿಂತನೆ ಮತ್ತು ಸಮಾನತೆಯು ಇಂದಿಗೂ ಸಹ ಆದರ್ಶಪ್ರಾಯ ಎಂದು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಇಂದು ಹಮ್ಮಿಕೊಂಡಿದ್ದ ಕನಕದಾಸರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಕನಕದಾಸರು 316 ಕೀರ್ತನೆಗಳನ್ನು ರಚಿಸಿದ್ದಾರೆ. ಬಹುತೇಕ ಕೀರ್ತನೆಗಳಲ್ಲಿ ಕನಕದಾಸರ ಭಕ್ತಿ ಪಾರಮ್ಯವನ್ನು ಅವರ ಕೀರ್ತನೆಗಳಲ್ಲಿ ಕಾಣಬಹುದು ಎಂದರು.

ಕನಕದಾಸರ ಕೀರ್ತನೆಗಳಲ್ಲಿ ಅವರ ಸಂದೇಶ ನೇರ ಮತ್ತು ಖಚಿತ. ಹಾಗೆಯೇ ಅಮೂರ್ತವಾದ ಪ್ರತಿಮಾ ನಿರೂಪಣೆಯಲ್ಲಿ ಪರಿಣಿತಿ ಹಾಗೂ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತ ಸಾಹಿತ್ಯಗಳ ಪರಿಚಯವನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ, ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಎಸ್.ಮಲ್ಲಿಕಾರ್ಜುನ್, ಮಹಿಳಾ ಮುಖಂಡರಾದ ಕವಿತಾ ಚಂದ್ರಶೇಖರ್, ದ್ರಾಕ್ಷಾಯಣಮ್ಮ, ರಾಜೇಶ್ವರಿ, ಬಾತಿ ಶಿವಕುಮಾರ್, ರಾಕೇಶ್, ಉಮೇಶ್ ಶೆಟ್ಟಿ ಮತ್ತಿತರರಿದ್ದರು.

# ಗುಡ್ಡಾಪುರದ ದಾನಮ್ಮ ದೇವಿ ಜಾತ್ರೆ ನಗರದಲ್ಲಿ ಪುರಾಣ, ಪ್ರವಚನ ಆರಂಭ



ದಾವಣಗೆರೆ, ನ. 30- ಶಿವಶರಣೆ ಗುಡ್ಡಾಪುರದ ಶ್ರೀ ದಾನಮ್ಮದೇವಿ ಛಟ್ಟಿ ಅಮವಾಸ್ಯೆ ಜಾತ್ರಾ ಮಹೋತ್ಸವದ ಅಂಗವಾಗಿ ನಗರದ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮದೇವಿ ದೇವಸ್ಥಾನದಲ್ಲಿ ಪುರಾಣ - ಪ್ರವಚನ ಮೊನ್ನೆ ಆರಂಭಗೊಂಡಿದ್ದು, ಇದೇ ದಿನಾಂಕ 11 ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ನಡೆಯಲಿದೆ.

ಪ್ರವಚನಕಾರರಾದ ಶ್ರೀ ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾದ ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಅವರು ಪ್ರವಚನದ ಉದ್ಘಾಟನೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಬೇತೂರು ರಾಜೇಶ್, ನಿಜಗುಣ ಶಿವಯೋಗಿಗಳು, ಮಾಗಾನಹಳ್ಳಿ ಬಸವರಾಜು, ಹೆಚ್.ಎಂ. ಕರಿಬಸಯ್ಯ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಪುಟ್ಟರಾಜ ಕವಿ ಗವಾಯಿಗಳವರಿಂದ ರಚಿತ ವಾದ ಶಿವಶರಣೆ ಗುಡ್ಡಾಪುರದ ದಾನಮ್ಮ ದೇವಿಯ ಪುರಾಣ ಮತ್ತು ಶ್ರೀ ಅಕ್ಕಮಹಾದೇವಿಯ ಚರಿತ್ರೆ ಪ್ರವಚನವನ್ನು ಶ್ರೀ ಪುಟ್ಟರಾಜ ಕವಿ ಗವಾಯಿ ಗಳವರ ಶಿಷ್ಯರಾದ ವೇ. ಮಹಾಂತೇಶ ಶಾಸ್ತ್ರಿಗಳು ಹಿರೇಮಠ (ಕಲ್ಲೂರು, ಚನ್ನಗಿರಿ) ಇವರು ನಡೆಸಿಕೊಡುವರು. ಸ್ಥಳೀಯ ಶ್ರೀ ವೀರೇಶ್ವರ ಪುಣ್ಯಾಶ್ರಮದ ಯಲಗೂರೇಶ ಟಕ್ಕಳಿಕಿ ಅವರು ತಬಲಾ ವಾದನ ನುಡಿಸುವರು.

ಡಿಸೆಂಬರ್ 12 ರ ಮಂಗಳವಾರ ಛಟ್ಟಿ ಅಮಾವಾಸ್ಯೆ ಇದ್ದು, ಅಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗಲಿದೆ.

ನಂತರ ಮಧ್ಯಾಹ್ನ 12.30ಕ್ಕೆ ಸರ್ವ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ದೇವರಮನೆ ಗಂಗಮ್ಮ ಮತ್ತು ಮಕ್ಕಳು (ದಾವಣಗೆರೆ), ಶ್ರೀಮತಿ ವೈ. ಭಾರತಿ ಮತ್ತು ವೈ.ವೆಂಕಟೇಶ ರೆಡ್ಡಿ (ಬೆಂಗಳೂರು) ಇವರು ದಾಸೋಹದ ಸೇವಾರ್ಥಿಗಳಾಗಿದ್ದಾರೆ.

# ನಗರದಲ್ಲಿ ಮೂಳೆ ಸಾಂದ್ರತೆ ತಪಾಸಣೆ ಶಿಬಿರ




ದಾವಣಗೆರೆ, ನ. 30- ಭಾವಸಾರ ವಿಷನ್ ಇಂಡಿಯಾ ದಾವಣಗೆರೆ ಹಾಗೂ ಸಿಟಿ ಸೆಂಟ್ರಲ್ ಹಾಸ್ಪಿಟಲ್ ಘಟಕ -2 ಹಾಗೂ ಸ್ಪೇರ್ ಕ್ಲಿನಿಕ್ ದಾವಣಗೆರೆ ವತಿಯಿಂದ ಉಚಿತ ಕೀಲು, ಮೂಳೆ, ಮಂಡಿ ಚಿಪ್ಪು ಮರು ಜೋಡಣೆ, ಮೂಳೆ ಸಾಂದ್ರತೆ ತಪಾಸಣಾ ಶಿಬಿರ ನಡೆಸಲಾಯಿತು.

**ಭಾವಸಾರ ವಿಷನ್ ಇಂಡಿಯಾ ವತಿಯಿಂದ ನಡೆದ ಶಿಬಿರವನ್ನು ನಡೆಸಿಕೊಟ್ಟ ಕೀಲು-ಮೂಳೆ ತಜ್ಞ ಡಾ. ಹರೀಶ್ ಪುರಾಣಿಕ್**

ರಮೇಶ್‌ಬಾಬು ಗುಜ್ಜರ್, ಶ್ರೀಮತಿ ಸರಳಾ ಅಮಟೆ, ಅಶೋಕ್ ನವಲೆ ಹಾಗೂ ಎ.ವಿ. ಅಶೋಕ್ ಅಂಬರ್‌ಕರ್, ಈಶ್ವರ್ ರಾವ್ ಗುಜ್ಜರ್, ಶಂಕರ್‌ರಾವ್ ನವಲೆ, ಬೆಂಗಳೂರಿನ ಕೀಲು-ಮೂಳೆ ತಜ್ಞ ಡಾ. ಹರೀಶ್ ಪುರಾಣಿಕ್, ಡಾ. ನಿತೀಶ್ ಕೊಟ್ರಪ್ಪ ಅವರುಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಿವಿಐ ಹಿರಿಯ ಸದಸ್ಯ ಗಣೇಶ ವಾದೋನೆ ಹಾಗೂ ವಿಷನ್ ಯೋಜನಾ ನಿರ್ದೇಶಕ ರಮೇಶ್‌ಬಾಬು ಅವರ ಪ್ರಾಯೋಜಕತ್ವದಲ್ಲಿ ರೋಗಿಗಳಿಗೆ ಔಷಧಗಳನ್ನು ವಿತರಿಸಲಾಯಿತು. ಶಂಕರ್‌ರಾವ್ ಬೋಂದಾಡೆ, ಸುರೇಶ್ ಪಟಕೆ, ಮಂಜುನಾಥ್ ಗಡ್ಡಾಳೆ, ಮಹೇಶ್ ಶೆಂಡಿಗಿ, ಅರುಣ ಅಂಬರ್‌ಕರ್, ನಯನ ಅಂಬರ್‌ಕರ್, ಅನುಸೂಯಾ ಗುಜ್ಜರ್, ಕವಿತ ಸರ್ವದೆ, ಶ್ರೀಮತಿ ಪ್ರೀತಿ ಲೋಖಂಡೆ ಉಪಸ್ಥಿತರಿದ್ದರು.

# ದುಬೈ ಕನ್ನಡಿಗರ ಮನ ಗೆದ್ದ ಚಿರಂತನ ಕಲಾವಿದೆಯರು




ದಾವಣಗೆರೆ, ನ.30- ದುಬೈ ಕರ್ನಾಟಕ ಸಂಘವು ಕರ್ನಾಟಕ ರಾಜ್ಯೋತ್ಸವವನ್ನು ಅಲ್ ನಸರ್ ಲೀಸರ್ ಲ್ಯಾಂಡ್, ಐಸ್ ರಿಂಕ್‌ನಲ್ಲಿ ವಿಜೃಂಭಣೆಯಿಂದ ಆಚರಿಸಿತು. ಅಲ್ಲಿ, ದಾವಣಗೆರೆಯ ಚಿರಂತನ ಸಾಂಸ್ಕೃತಿಕ ತಂಡವು ವಿಶೇಷ ನೃತ್ಯ ಪ್ರದ ರ್ಶನಗಳನ್ನು ನೀಡಿ, ದುಬೈ ಕನ್ನಡಿಗರ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾಯಿತು.

ನಾಡ ದೇವತೆ ಚಾಮುಂಡೇಶ್ವರಿಯ ನೃತ್ಯ ರೂಪಕವನ್ನು ಚಿರಂತನದ ಕಲಾವಿದೆಯರು ಆಕರ್ಷಕವಾಗಿ ಪ್ರದರ್ಶಿಸಿ, ಪ್ರೇಕ್ಷಕರ ಜೊತೆಗೆ ಅತಿಥಿಯಾಗಿ ಆಗಮಿಸಿದ್ದ ಸಂಸದರೂ ಆಗಿರುವ ನಟಿ ಶ್ರೀಮತಿ ಸುಮಲತಾ ಅಂಬರೀಶ್ ತಮ್ಮ ಭಾಷಣದಲ್ಲಿ ಚಿರಂತನ ತಂಡದ ವಿದ್ಯಾರ್ಥಿನಿಯರನ್ನು ಕುರಿತು ಪ್ರಶಂಸೆ ನೀಡಿದ್ದು ವಿಶೇಷವಾಗಿತ್ತು.

ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರು ಕೂಡ ಚಿರಂತನದ ನೃತ್ಯ ಪ್ರದರ್ಶನಕ್ಕೆ ತಮ್ಮ ಭಾಷಣದಲ್ಲಿ ಮೆಚ್ಚುಗೆ ಸೂಚಿಸಿದರು. ವಿಭಿನ್ನ ಜಾನಪದ ನೃತ್ಯಗಳನ್ನು ಪ್ರದರ್ಶಿಸಿ ಪ್ರೇಕ್ಷಕರ ಮನ ಗೆಲ್ಲುವಲ್ಲಿ ತಂಡ ಯಶಸ್ವಿಯಾಯಿತು.

# ಕಚ್ಚಾ ತೈಲ ಬೆಲೆ 80 ಡಾಲರ್‌ಗೆ ಬಂದರೆ ಮಾತ್ರ ಪೆಟ್ರೋಲ್, ಡೀಸೆಲ್ ಬೆಲೆ ಪರಿಷ್ಕರಣೆ



ನವದೆಹಲಿ, ನ. 30 – ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 80 ಡಾಲರ್‌ಗಳಿಗೂ ಕಡಿಮೆ ಹಂತದಲ್ಲಿ ಸ್ಥಿರಗೊಂಡರೆ ಮಾತ್ರ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಪ್ರತಿದಿನ ಬೆಲೆ ಪರಿಷ್ಕರಿಸುವ ಪದ್ಧತಿಗೆ ಮರಳಲಿವೆ ಎಂದು ಉದ್ಯಮದ ಅಧಿಕಾರಿಗಳು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಾದ ಐ.ಒ.ಸಿ. ಎಲ್., ಬಿ.ಪಿ.ಸಿ.ಎಲ್. ಹಾಗೂ ಹೆಚ್.ಪಿ.ಸಿ.ಎಲ್.ಗಳು ತೈಲ ಮಾರುಕಟ್ಟೆಯಲ್ಲಿ ಶೇ.90ರ ಪಾಲುಗಾರಿಕೆ ಹೊಂದಿವೆ. ಕಳೆದ 20 ತಿಂಗಳಿನಿಂದ ಈ ಕಂಪನಿಗಳು ತೈಲ ಬೆಲೆಯಲ್ಲಿ ಪರಿಷ್ಕರಣೆ ಮಾಡಿಲ್ಲ.

ಕಳೆದ ವರ್ಷ ಕಚ್ಚಾ ತೈಲದ ಬೆಲೆ ತೀವ್ರವಾಗಿ ಹೆಚ್ಚಿದ್ದರೂ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಿಸಿರಲಿಲ್ಲ. ಇದರಿಂದಾಗಿ ಕಂಪನಿಗಳಿಗೆ ತೀವ್ರ ನಷ್ಟವಾಗಿತ್ತು. ನಂತರದಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ಇದರಿಂದಾಗಿ ಕಂಪನಿಗಳು ಲಾಭಕ್ಕೆ ಮರಳಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ತೀವ್ರ ಏರಿಳಿತವಾಗುತ್ತಿದೆ. ಹೀಗಾಗಿ ಬೆಲೆಗಳನ್ನು ಪರಿಷ್ಕರಿಸುತ್ತಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ತೈಲ ಕಂಪನಿಗಳು ಬೆಲೆಯನ್ನು ಲೀಟರ್‌ಗೆ 1 ರೂ. ಕಡಿತ ಮಾಡಿದರೂ ಪ್ರತಿಯೊಬ್ಬರೂ ಚಪ್ಪಾಳೆ ತಟ್ಟುತ್ತಾರೆ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಾದಾಗ, ಮಾರಾಟ ಬೆಲೆಯನ್ನೂ ಹೆಚ್ಚಿಸಲು ಅವಕಾಶ ನೀಡುವುದು ಅನುಮಾನ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಸಕ್ತ ಭಾರತ ಆಮದು ಮಾಡಿಕೊಳ್ಳುತ್ತಿರುವ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್‌ಗೆ ಸರಾಸರಿ 83.42 ಡಾಲರ್‌ಗಳಷ್ಟಿದೆ. ಕಳೆದ ಅಕ್ಟೋಬರ್‌ನಲ್ಲಿ ಈ ಬೆಲೆ 90.08 ಡಾಲರ್ ಹಾಗೂ ಸೆಪ್ಟೆಂಬರ್‌ನಲ್ಲಿ 93.54 ಡಾಲರ್ ಆಗಿತ್ತು.

ಈಗಿರುವ ಬೆಲೆಗಳಲ್ಲಿ ಕಂಪನಿಗಳು ಸ್ವಲ್ಪ ಲಾಭ ಪಡೆಯುತ್ತಿವೆ. ಆದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಸಾಕಷ್ಟು ಏರಿಳಿತ ಇದೆ. ಇದರಿಂದಾಗಿ ಲಾಭದಲ್ಲಿ ಸ್ಥಿರತೆ ಇಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ವರ್ಷ ಕಚ್ಚಾ ತೈಲ ಬೆಲೆ ಏರಿಕೆಯಾದ ಸಂದರ್ಭದಲ್ಲೂ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಸಿರಲಿಲ್ಲ. ಹೀಗಾಗಿ ಕಂಪನಿಗಳು ಸಾಕಷ್ಟು ನಷ್ಟ ಅನುಭವಿಸಿವೆ. ಕಚ್ಚಾ ತೈಲದ ಬೆಲೆ ನಿರಂತರವಾಗಿ 80 ಡಾಲರ್‌ಗಳಿಗೂ ಕಡಿಮೆ ಹಂತಕ್ಕೆ ಬಂದರೆ ಮಾತ್ರ ಪ್ರತಿದಿನ ಬೆಲೆ ಪರಿಷ್ಕರಣೆ ಸಾಧ್ಯ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

॥ ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ॥, ತಾ॥ ಕಬ್ಬೂರು ಗ್ರಾಮದ ವಾಸಿ
ಶ್ರೀಮತಿ ಪಾರ್ವತಮ್ಮ
ದಿ॥ ಶ್ರೀ ಕೆ.ಜಿ. ಬಸವರಾಜಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 24.11.2023ನೇ ಶುಕ್ರವಾರ ರಾತ್ರಿ 11.50ಕ್ಕೆ ನನ್ನ ಮಗನಾದ
ಶ್ರೀ ಕೆ.ಬಿ. ದಯಾನಂದರವರು
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 02.12.2023ನೇ ಶನಿವಾರ ಬೆಳಿಗ್ಗೆ 10.30ಕ್ಕೆ
ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್, ದಾವಣಗೆರೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಪಾರ್ವತಮ್ಮ ದಿ॥ ಶ್ರೀ ಕೆ.ಜಿ. ಬಸವರಾಜಪ್ಪ ಮತ್ತು ಮಕ್ಕಳು, ಸಹೋದರರು, ಅಳಿಯಂದಿರು, ಗಂಗಜ್ಜರ ವಂಶಸ್ಥರು, ಕಬ್ಬೂರು ಹಾಗೂ ಅಪಾರ ಬಂಧು-ಮಿತ್ರರು. ಫೋ. : 9449674899

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಜನ್ಮ ದಿನದ ಶುಭಾಶಯಗಳು




ಇಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ದಾವಣಗೆರೆ ಉದ್ಯಮಿಗಳೂ, ನಮ್ಮೆಲ್ಲರ ಮಾರ್ಗದರ್ಶಕರೂ, ಆಕಾಶ್ ರೈಸ್ ಇಂಡಸ್ಟ್ರೀಸ್ ಮಾಲೀಕರಾದ
ಶ್ರೀ ಜರೀಕಟ್ಟೆ ಸುರೇಶ್ ಅವರಿಗೆ
51ನೇ ವರ್ಷದ ಜನ್ಮ ದಿನದ ಶುಭಾಶಯಗಳು.



ಪರಮೇಶ್ ಎಸ್. ಜರೀಕಟ್ಟೆ, ವಿನಯ್ ರೈಸ್ ಇಂಡಸ್ಟ್ರೀಸ್
ಸಂದೀಪ್ ನಾಯಕ್, ಆಧ್ಯಾ ಗ್ರೀನ್ ರೆಸಾರ್ಟ್ಸ್
ಮಂಜುನಾಥ್ ಬಳ್ಳಾರಿ, ಭತ್ತದ ವ್ಯಾಪಾರಿ